ಸಂಪುಟ 01 | ಸಂಚಿಕೆ 230 ಭಾನುವಾರ 25 ಅಕ್ಟೋಬರ್ 2026 | ಪುಟ 4 | ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಕಲಾವಿದರ ದಿನ (International Artist Day) ಕಲಾವಿದರ ಸೃಜನಶೀಲತೆ, ಪ್ರತಿಭೆ ಮತ್ತು ಕಲಾ ಕ್ಷೇತ್ರಕ್ಕೆ ಅವರು ನೀಡುವ ಕೊಡುಗೆಗಳನ್ನು ಗೌರವಿಸುವ ದಿನ.

2) ಅಂತರರಾಷ್ಟ್ರೀಯ ಕುಬ್ಜತೆ ಜಾಗೃತಿ ದಿನ (International Dwarfism Awareness Day) ಕುಬ್ಜತೆ ಹೊಂದಿರುವ ಜನರ ಬಗ್ಗೆ ಜಾಗೃತಿ ಮೂಡಿಸಿ, ಸಮಾನತೆ ಮತ್ತು ಗೌರವವನ್ನು ಉತ್ತೇಜಿಸುವ ದಿನ.

3) ವಿಶ್ವ ಮೊಣಕಾಲು ದಿನ (World Knee Day) ಮೊಣಕಾಲಿನ ಆರೋಗ್ಯ ಮತ್ತು ಅದರ ಆರೈಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನ.

4) ವಿಶ್ವ ಒಪೆರಾ ದಿನ (World Opera Day) ಒಪೆರಾ ಸಂಗೀತ, ಗಾಯನ ಮತ್ತು ರಂಗಕಲೆಯ ಮಹತ್ವವನ್ನು ಪರಿಚಯಿಸುವ ದಿನ.

5) ವಿಶ್ವ ಸ್ಪೈನಾ ಬೈಫಿಡಾ ಮತ್ತು ಹೈಡ್ರೋಸೆಫಾಲಸ್ ದಿನ (World Spina Bifida and Hydrocephalus Day) ಈ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ದಿನ.

6)MDS ವಿಶ್ವ ಜಾಗೃತಿ ದಿನ (MDS World Awareness Day) ಮೈಲೋಡಿಸ್ಪ್ಲಾಸ್ಟಿಕ್ ಸಿಂಡ್ರೋಮ್‌ಗಳ (MDS) ಬಗ್ಗೆ ಜನರಲ್ಲಿ ಅರಿವು ಮೂಡಿಸುವ ದಿನ.

ಸುಭಾಷಿತ

ಒಮ್ಮೆ ನೀವು ಯಾವುದಾದರೂ ಕೆಲಸ ಮಾಡಲು ಪ್ರಾರಂಭಿಸಿದ ಬಳಿಕ ಸೋಲಿನ ಬಗ್ಗೆ ಭಯ ಪಡಬೇಡಿ ಅಥವಾ ಹಿಂದಡಿ ಇಡಬೇಡಿ

–ಚಾಣಕ್ಯ

ಪ್ರಕಟಣೆ

ಆದಿಯೋಗಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಿಂಧನೂರು ತಾ॥ಸಿಂಧನೂರು ಜಿ ರಾಯಚೂರು ಇದರ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಗೆ ನಾಮಪತ್ರ ಸಲ್ಲಿಸಲು ಪ್ರಾರಂಭದಿನಾಂಕ:18–10–2026 ಹಾಗೂ ಕೊನೆಯ ದಿನಾಂಕ:25–10–2026, ನಾಮಪತ್ರ ಪರಿಶೀಲನೆ ದಿನಾಂಕ:26–10–2026ರಂದು ಹಾಗೂ ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನಾಂಕ:27–10–2026 ಆಗಿರುತ್ತದೆ. ಚುನಾವಣೆ ಅವಶ್ಯವಾದಲ್ಲಿ ದಿನಾಂಕ:02–11–2026 ರಂದು ಸಂಘದ ಕಛೇ–ರಿಯಲ್ಲಿ ಚುನಾವಣೆ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಿ ಬಹುದಾಗಿದೆಯೆಂದು ತಿಳಿಸಿದೆ.

ಸ್ಥಳ: ಸಿಂಧನೂರು
2:17–10–2026

ಸಹಿ/–
(ಶಿವಪ್ಪ ಹಿ.ನಿ) ರಿಟರ್ನಿಂಗ್ ಅಧಿಕಾ–ರಿಗಳುಆದಿಯೋಗಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಸಿಂಧನೂರು ತಾ॥ ಸಿಂಧನೂರು ಜಿ॥ ರಾಯಚೂರು

ದಂತ ಆರೋಗ್ಯದ ಕುರಿತು ಸನ್ ರೈಸ್ ಕಾಲೇಜಿನಲ್ಲಿ ಶನಿವಾರದ ವಿಶೇಷ ಉಪನ್ಯಾಸ

ದಂತ ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಡಾ. ಪ್ರವೀಣ್ ಕುಮಾರ್

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು, ಅಕ್ಟೋಬರ್ 24: ನಗರದ ಪ್ರತಿಷ್ಠಿತ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನ ವತಿಯಿಂದ ಪ್ರತೀ ಶನಿವಾರ ಹಮ್ಮಿಕೊಳ್ಳಲಾಗುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಅಕ್ಟೋಬರ್ 24ರ ಶನಿವಾರದಂದು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ದಂತ ಆರೋಗ್ಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಸಿಂಧನೂರಿನ ಸುರಕ್ಷಾ ಡೆಂಟಲ್ ಕೇರ್‌ನ ಖ್ಯಾತ ದಂತ ತಜ್ಞರಾದ ಡಾ. ಪ್ರವೀಣ್ ಕುಮಾರ್ (BDS, Dental Surgeon) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ವಿದ್ಯಾರ್ಥಿಗಳಿಗೆ ದಂತ ಆರೋಗ್ಯದ ಮಹತ್ವದ ಕುರಿತು ಉಪಯುಕ್ತ ಮಾಹಿತಿಯನ್ನು ನೀಡಿದರು.

ಉಪನ್ಯಾಸದಲ್ಲಿ ಮಾತನಾಡಿದ ಡಾ. ಪ್ರವೀಣ್ ಕುಮಾರ್ ಅವರು, ದೇಹದ ಒಟ್ಟಾರೆ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಬಾಯಿ ಮತ್ತು ಹಲ್ಲುಗಳ ಆರೋಗ್ಯ ಪ್ರಮುಖ ಪಾತ್ರ ವಹಿಸುತ್ತದೆ. ಹಲ್ಲುಗಳನ್ನು ಸರಿಯಾಗಿ ಸ್ವಚ್ಛಗೊಳಿಸುವುದು, ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ಹಲ್ಲುಜ್ಜುವ ಅಭ್ಯಾಸ ಬೆಳೆಸಿಕೊಳ್ಳುವುದು, ಆಹಾರ ಸೇವನೆಯ ನಂತರ ಬಾಯಿಯ ಸ್ವಚ್ಛತೆಗೆ ಗಮನ ನೀಡುವುದು ಹಾಗೂ ನಿಯಮಿತವಾಗಿ ದಂತ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದು ತಿಳಿಸಿದರು. ಹಲ್ಲುಗಳಲ್ಲಿ ನೋವು, ವಸಡುಗಳಲ್ಲಿ ರಕ್ತಸ್ರಾವ, ಬಾಯಿಯ ದುರ್ವಾಸನೆ ಹಾಗೂ ಇತರ ದಂತ ಸಮಸ್ಯೆಗಳನ್ನು ನಿರ್ಲಕ್ಷಿಸದೆ ಆರಂಭಿಕ ಹಂತದಲ್ಲಿಯೇ ಸೂಕ್ತ ಚಿಕಿತ್ಸೆ ಪಡೆಯಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಇಂದಿನ ಜೀವನಶೈಲಿ, ಆಹಾರ ಪದ್ಧತಿ ಹಾಗೂ ವೈಯಕ್ತಿಕ ಸ್ವಚ್ಛತೆಯ ಅಭ್ಯಾಸಗಳು ದಂತ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಅತಿಯಾದ ಸಿಹಿ ಪದಾರ್ಥಗಳ ಸೇವನೆಯನ್ನು ನಿಯಂತ್ರಿಸುವುದು, ಪೌಷ್ಟಿಕ ಆಹಾರ ಸೇವಿಸುವುದು ಮತ್ತು ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಆರೋಗ್ಯಕರ ಜೀವನಕ್ಕೆ





ಅಗತ್ಯವಾಗಿದೆ ಎಂದು ಅವರು ವಿವರಿಸಿದರು. ದಂತ ಆರೋಗ್ಯದ ಬಗ್ಗೆ ಚಿಕ್ಕ ವಯಸ್ಸಿನಿಂದಲೇ ಜಾಗೃತಿ ಮೂಡಿಸಿಕೊಳ್ಳುವುದರಿಂದ ಭವಿಷ್ಯದಲ್ಲಿ ಎದುರಾಗಬಹುದಾದ ಅನೇಕ ಸಮಸ್ಯೆಗಳನ್ನು ತಡೆಗಟ್ಟಬಹುದು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ಮಾತನಾಡಿದ ಅವರು, ಆರೋಗ್ಯ ಸೇವಾ ಕ್ಷೇತ್ರದಲ್ಲಿ ನರ್ಸಿಂಗ್ ಸಿಬ್ಬಂದಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ರೋಗಿಗಳ ಆರೈಕೆ, ವೈದ್ಯಕೀಯ ಸಿಬ್ಬಂದಿಯೊಂದಿಗೆ ಸಮನ್ವಯ, ರೋಗಿಗಳಿಗೆ ಮಾನಸಿಕ ಧೈರ್ಯ ತುಂಬುವುದು ಹಾಗೂ ಆರೋಗ್ಯದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ನರ್ಸಿಂಗ್ ವೃತ್ತಿಯ ಪ್ರಮುಖ ಜವಾಬ್ದಾರಿಗಳಾಗಿವೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಜೊತೆಗೆ ಪ್ರಾಯೋಗಿಕ ಜ್ಞಾನ, ಸಂವಹನ ಕೌಶಲ್ಯ, ಮಾನವೀಯ ಮೌಲ್ಯಗಳು ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಆರೋಗ್ಯ ಸೇವಾ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ನಿರಂತರ ಕಲಿಕೆ, ಶಿಸ್ತು, ಸಮಯಪಾಲನೆ, ಸೇವಾ ಮನೋಭಾವ ಮತ್ತು ವೃತ್ತಿಪರ ಜ್ಞಾನ ಅತ್ಯಗತ್ಯ. ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಂಡು ಪರಿಶ್ರಮದಿಂದ ಅಧ್ಯಯನ ಮಾಡಬೇಕು. ರೋಗಿಗಳೊಂದಿಗೆ ಸಹಾನುಭೂತಿ ಹಾಗೂ ಗೌರವದಿಂದ ವರ್ತಿಸುವ ಮೂಲಕ ಉತ್ತಮ ಆರೋಗ್ಯ ಸೇವಕರಾಗಿ ರೂಪುಗೊಳ್ಳಬೇಕು ಎಂದು ಅವರು ಪ್ರೇರಣಾದಾಯಕ ಮಾತುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು.

ಸನ್ ರೈಸ್ ವಿದ್ಯಾ ಸಂಸ್ಥೆಯು ಪ್ರತೀ ಶನಿವಾರ ಇಂತಹ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ವಿದ್ಯಾರ್ಥಿಗಳ ಜ್ಞಾನವೃದ್ಧಿ ಹಾಗೂ ವೃತ್ತಿಪರ ಕೌಶಲ್ಯಗಳ ಅಭಿವೃದ್ಧಿಗೆ ಸಹಕಾರಿಯಾಗಿದೆ. ಪಠ್ಯಪುಸ್ತಕದ ಜ್ಞಾನದ ಜೊತೆಗೆ ವೈದ್ಯಕೀಯ ಕ್ಷೇತ್ರದ ಅನುಭವ ಹೊಂದಿರುವ ತಜ್ಞ–ರಿಂದ ನೇರವಾಗಿ ಮಾಹಿತಿ ಪಡೆಯುವ ಅವಕಾಶ ವಿದ್ಯಾರ್ಥಿಗಳಿಗೆ ದೊರೆಯುತ್ತಿದೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಹೊಸ ವಿಷಯಗಳನ್ನು ಕಲಿಯುವ ಆಸಕ್ತಿ ಮೂಡಿಸುವುದರ ಜೊತೆಗೆ ಭವಿಷ್ಯದ ವೃತ್ತಿಜೀವನಕ್ಕೆ ಅಗತ್ಯವಾದ ಅರಿವು ಮತ್ತು ಆತ್ಮವಿಶ್ವಾಸವನ್ನು ಬೆಳೆಸಲು ಸಹಕಾರಿಯಾಗಿವೆ.

ಕಾರ್ಯಕ್ರಮದ ಸಂದರ್ಭದಲ್ಲಿ ಮಾತನಾಡಿದ ಉಪನ್ಯಾಸಕ ವೀರೇಶ್ ಅವರು, ವಿದ್ಯಾರ್ಥಿಗಳಿಗೆ ದಂತ ಆರೋಗ್ಯದ ಕುರಿತು ಅಮೂಲ್ಯವಾದ ಮಾಹಿತಿ ನೀಡುವುದರ ಜೊತೆಗೆ ನರ್ಸಿಂಗ್ ವೃತ್ತಿಯ ಮಹತ್ವವನ್ನು ತಿಳಿಸಿ, ಅವರಲ್ಲಿ ಆತ್ಮವಿಶ್ವಾಸ ತುಂಬಿದ ಡಾ. ಪ್ರವೀಣ್ ಕುಮಾರ್ ಅವರಿಗೆ ಕೃತಜ್ಞತೆ ಸಲ್ಲಿಸಿದರು. ವೈದ್ಯಕೀಯ ಕ್ಷೇತ್ರದ ತಜ್ಞರು ಸಂಸ್ಥೆಗೆ ಆಗಮಿಸಿ ತಮ್ಮ ಅನುಭವ ಹಾಗೂ ಜ್ಞಾನವನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಇಂತಹ ಉಪನ್ಯಾಸಗಳು ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಮತ್ತು ಭವಿಷ್ಯದ ವೃತ್ತಿಜೀವನಕ್ಕೆ ಉತ್ತಮ ಮಾರ್ಗದರ್ಶನ ನೀಡುತ್ತವೆ ಎಂದು ಹೇಳಿದರು.

ಅಲ್ಲದೆ, ಸನ್ ರೈಸ್ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ., ಕಾರ್ಯದರ್ಶಿಗಳಾದ ಇರ್ಷಾದ್ ಕೆ., ಎಲ್ಲಾ ವಿಭಾಗಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಡಾ. ಪ್ರವೀಣ್ ಕುಮಾರ್ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ, ಆರೋಗ್ಯ ಕ್ಷೇತ್ರದ ಕು–ರಿತು ಪ್ರಾಯೋಗಿಕ ಜ್ಞಾನ ಹಾಗೂ ವೃತ್ತಿಪರ ಕೌಶಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಸನ್ ರೈಸ್ ವಿದ್ಯಾ ಸಂಸ್ಥೆಯು ಇಂತಹ ಶೈಕ್ಷಣಿಕ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಿದ್ದು, ಶನಿವಾರದ ವಿಶೇಷ ಉಪನ್ಯಾಸ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಉಪಯುಕ್ತ ಹಾಗೂ ಪ್ರೇರಣಾದಾಯಕವಾಗಿ ಮೂಡಿಬಂತು.





ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಆಪರೇಷನ್: ಕಾಂಗ್ರೆಸ್‌ನವರೇ ಸೂತ್ರದಾರ" ವರುಣಾ ಮುಖಂಡರ ಸ್ಫೋಟಕ ಅಭಿಪ್ರಾಯ!

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನ ವಿರುದ್ಧ ಮಾಡಿರುವ ಸ್ಟಿಂಗ್ ಆಪರೇಷನ್ ವಿಚಾರ ಭಾರಿ ಸದ್ದು ಮಾಡುತ್ತಿದ್ದು ಇದರ ನಡುವೆ ನೆನ್ನೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಸ್ಟಿಂಗ್ ಆಪರೇಷನ್ ನಡೆಸಿರುವ ಪವರ್ ಟಿವಿ ಎಂಡಿ ಹಾಗೂ ಕಾಂಗ್ರೆಸ್ ಪಕ್ಷದ ಮಹಿಳಾ ಕಾರ್ಯಕರ್ತೆ ಒಬ್ಬರು ಭಾಗಿಯಾಗಿ ಸಿದ್ದರಾಮಯ್ಯ ವಿರುದ್ಧ ಕುತಂತ್ರ ನಡೆಸಿರುವುದು ಬಹಿರಂಗವಾಗಿದೆ ಎಂದು ಹೇಳಿರುವ

ಹಿನ್ನೆಲೆಯಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕೆರಳಿ ಕೆಂಡವಾಗಿದ್ದು ಇದರ ಸೂತ್ರದಾರ ಮೂಲ ವ್ಯಕ್ತಿ ಕಾಂಗ್ರೆಸ್ಸಿನವರೇ ಆದ–'ರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭಾರಿ ಒಡತೆ ಬೀಳುವುದು ಗ್ಯಾರಂಟಿ ಎಂದು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ನಂಜಯ್ಯ ಮಾಜಿ ಸದಸ್ಯ ಶಿವನಂಜು ರವರು ಸುದ್ದಿಗಾರರಿಗೆ ತಿಳಿಸಿದರು

ಅವರು ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಕೆಂಪಿಸಿದ್ರ ಹುಂಡಿ ಗ್ರಾಮದಲ್ಲಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಸಿದ್ದರಾಮಯ್ಯನವರು ಎರಡು ಬಾರಿ ಮುಖ್ಯಮಂತ್ರಿ ಆಗಿ ಎಂಟು ವರ್ಷಗಳ ಕಾಲ ಸುಧೀರ್ಘ ಮುಖ್ಯಮಂತ್ರಿಯಾಗಿ ರಾಜ್ಯದ ಜನರ



ಏಳಿಗೆಗೆ ಶ್ರಮಿಸಿದ್ದಾರೆ ಅಲ್ಲದೆ ಅವರು ನಡೆದು ಬಂದ ದಾರಿ ಯಾರಿಗೂ ಕೆಟ್ಟದ್ದನ್ನು ಬಯಸಿದಂತಹ ಸಿದ್ದರಾಮಯ್ಯನವರು ಸಾಮಾಜಿಕ ನ್ಯಾಯದ ಅಡಿಯಲ್ಲಿ ತಮ್ಮ ರಾಜಕೀಯ ಜೀವನವನ್ನು ನಡೆಸಿಕೊಂಡು ಬಂದಂತ ಮಹಾ ನಾಯಕ ಅವರ ವಿರುದ್ಧ ಇಂತಹ ಕುತಂತ್ರ ರಾಜಕಾರಣ ಮತ್ತು ಅವರ ವ್ಯಕ್ತಿತ್ವಕ್ಕೆ ಅವರ ಮುಖಕ್ಕೆ ಮಸಿ ಬೆಳೆಯುವಂತಹ ಮತ್ತು ಅವರ ಶಕ್ತಿಯನ್ನು ಹೊಂದಿಸುವಂತಹ ಕುಚೋದ್ಯ ಪಿತೂರಿ ನಡೆಸಿರುವುದು ಖಂಡನೀಯವಾದದ್ದು

ಈ ಒಂದು ಸ್ಟಿಂಗ್ ಆಪರೇಷನ್ ಅಲ್ಲಿ ಈಗ ಸಿಕ್ಕಿರುವ ಮಾಹಿತಿ ಪ್ರಕಾರ ಒಬ್ಬರು ಕಾಂಗ್ರೆಸ್ ಕಾರ್ಯಕರ್ತೆ ಇನ್ನೊಬ್ಬರು ಟಿವಿ ಮಾಧ್ಯಮದವರು ಎಂದು ಗೊತ್ತಾಗಿದ್ದು ಇದರ ಹಿಂದಿನ ಸೂತ್ರದಾರ ಮೂಲ ವ್ಯಕ್ತಿ ಕಾಂಗ್ರೆಸ್ಸಿನವರೇ ಎಂದು ಗೊತ್ತಾದರೆ ಮಾತ್ರ ರಾಜ್ಯದಲ್ಲಿ ದೇಶದಲ್ಲಿಯೇ ಕಾಂಗ್ರೆಸ್ ಪಕ್ಷಕ್ಕೆ ಉಳಿಗಾಲವಿಲ್ಲ ಕಾಂಗ್ರೆಸ್ ಪಕ್ಷವು ಗೆಲ್ಲುವುದಿಲ್ಲ ಎಂದು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ನಂಜಯ್ಯ ಹಾಗೂ ಮಾಜಿ ಸದಸ್ಯ ಶಿವಣ್ಣ ರವರು ಹಾಗೂ ಕಾಂಗ್ರೆಸ್ ಮುಖಂಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಈ ಸ್ಟಿಂಗ್ ಆಪರೇಷನ್ ಮಾಡಿ ಸುತ್ತಿರುವ ವಿರುದ್ಧ ಆಕ್ರೋಸ್ ವ್ಯಕ್ತಪಡಿಸಿದರು.

ಡಿಸ್ಟ್ರಿಬ್ಯೂಟರ್ 82 ರ ಉಪ ಕಾಲುವೆಯ ನೀರಿಗಾಗಿ ರೈತರ ಧರಣಿ ಸತ್ಯಾಗ್ರಹ

ವಾರಬಂದಿ ಪದ್ಧತಿ ವೈಜ್ಞಾನಿಕವಾಗಿ ಜಾರಿಗೊಳಿಸಲು ಒತ್ತಾಯ; ಜೋಳದ ಬೆಳೆ ಉಳಿಸಲು 10 ದಿನ ನೀರು ಹರಿಸುವಂತೆ ಜಿಲ್ಲಾಧಿಕಾರಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

ಸಿರವಾರ: ತುಂಗಭದ್ರಾ ಎಡದಂಡೆ ನಾಲೆಯ ಡಿಸ್ಟ್ರಿಬ್ಯೂಟರ್ ನಂ. 82ರ ಉಪಕಾಲುವೆಯ ಕೆಳಭಾಗದ ರೈತರಿಗೆ ಸಮರ್ಪಕವಾಗಿ ನೀರು ಹ–ರಿಸಬೇಕು ಹಾಗೂ ವಾರಬಂದಿ ಪದ್ಧತಿಯನ್ನು ವೈಜ್ಞಾನಿಕವಾಗಿ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ. ರೈತರ ಸಮಸ್ಯೆಗಳನ್ನು ಕೂಡಲೇ ಪರಿಹರಿಸದಿದ್ದರೆ ಧರಣಿ ಸತ್ಯಾಗ್ರಹ ನಡೆಸುವುದಾಗಿ ಸಂಘ ಎಚ್ಚರಿಕೆ ನೀಡಿದೆ.

ಈ ಕುರಿತು ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್ ಇಂಗಳದಾಳ ಅವರ ನೇತೃತ್ವದಲ್ಲಿ ಅ.24ರಂದು ರಾಯಚೂರು ಜಿಲ್ಲಾಧಿಕಾರಿಗಳಿಗೆ, ಸಿರವಾರ ತಹಸೀಲ್ದಾರರ ಮೂಲಕ ಮನವಿ ಸಲ್ಲಿಸಲಾಯಿತು.

ಕೆಳಭಾಗದ ಜಮೀನುಗಳಿಗೆ ನೀರು ತಲುಪುತ್ತಿಲ್ಲ ಎಂಬ ಆರೋಪ

ಡಿ–82 ಉಪಕಾಲುವೆಯಲ್ಲಿ ವಾರಬಂದಿ ಪದ್ಧತಿ ಜಾರಿಯಲ್ಲಿದ್ದರೂ ಕೆಳಭಾಗದ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂದು ರೈತ ಸಂಘ ಆರೋಪಿಸಿದೆ. ನೀರು ಹರಿಸಲು ಆರಂಭಿಸಿ ಸುಮಾರು ಎರಡು ತಿಂಗಳು ಕಳೆದರೂ ಕೆಳಭಾಗದ ಹಲವು ಜಮೀನುಗಳಿಗೆ ನೀರು ಬಂದಿಲ್ಲ. ಇದ–ರಿಂದ ಜೋಳದ ಬೆಳೆ ಒಣಗುವ ಆತಂಕ



ಎದುರಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮೇಲ್ಭಾಗದ ರೈತರು ನೀರು ಪಡೆಯುತ್ತಿದ್ದರೆ, ಕೆಳಭಾಗದ ರೈತರು ನೀರಿಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಕ್ರಮವಾಗಿ ನೀರು ಪಡೆಯುವುದು, ಸಾಮರ್ಥ–'ೄಕ್ಕಿಂತ ದೊಡ್ಡ ಪೈಪುಗಳ ಅಳವಡಿಕೆ, ಇಂಜಿನ್‌ಗಳ ಬಳಕೆ ಹಾಗೂ ಕಾಲುವೆಯ ಪಕ್ಕದಲ್ಲಿ ನೀರು ಸೋರಿಕೆಯಾಗುವ ಸ್ಥಳಗಳಿಂದ ಕೆಳಭಾಗಕ್ಕೆ ನೀರು ತಲುಪದಂತಾಗಿದೆ ಎಂದು ಸಂಘ ದೂರಿದೆ.

10 ದಿನ ನೀರು ಹರಿಸಲು ಒತ್ತಾಯ

ಚೈನ್ ನಂ. 335ರಿಂದ 476ರವರೆಗೆ ಹಾಗೂ 82/3 ವ್ಯಾಪ್ತಿಯ ಕೆಳಭಾಗದಲ್ಲಿ ಬೆಳೆದು ನಿಂತಿ–ರುವ ಜೋಳದ ಬೆಳೆಗೆ ತಕ್ಷಣ ನೀರು ಹರಿಸಬೇಕು.

ಕೆಳಭಾಗದ ರೈತರ ಜಮೀನುಗಳಿಗೆ ನೀರು ತಲುಪುವವರೆಗೆ ಮೇಲ್ಭಾಗದ ಕೆಲವು ನೀರು ಹೊರಹರಿವುಗಳನ್ನು (ಕ.ಔ) ತಾತ್ಕಾಲಿಕವಾಗಿ ನಿಯಂತ್ರಿಸಿ, ಕೆಳಭಾಗಕ್ಕೆ 10 ದಿನಗಳ ಕಾಲ ನೀರು ಹರಿಸಬೇಕು ಎಂದು ರೈತ ಸಂಘ ಆಗ್ರಹಿಸಿದೆ.

ಕೆಳಭಾಗದ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಸುಮಾರು 2,500ರಿಂದ 3,000 ಎಕರೆ ಪ್ರದೇಶದಲ್ಲಿ ಜೋಳದ ಬೆಳೆ ಇದೆ. ಸಕಾಲದಲ್ಲಿ ನೀರು ದೊರೆಯದಿದ್ದರೆ ನಾಲ್ಕೈದು ಗ್ರಾಮಗಳ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ಮನವಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ವಾರಬಂದಿ ಪದ್ಧತಿ ಮರುಹಂಚಿಕೆಗೆ ಆಗ್ರಹ

ಉಪಕಾಲುವೆಯ ವಾರಬಂದಿ ವ್ಯವಸ್ಥೆಯಲ್ಲಿ ಮೇಲ್ಭಾಗ ಮತ್ತು ಕೆಳಭಾಗದ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಹಂಚಿಕೆ ಮಾಡುವ ವಿಧಾನ ಅವೈಜ್ಞಾನಿಕವಾಗಿದೆ ಎಂದು ಸಂಘ ಅಭಿಪ್ರಾಯಪಟ್ಟಿದೆ. ಎಕರೆವಾರು ಸಮಾನ ಹಂಚಿಕೆ ಆಧರಿಸಿ ರೊಟೇಷನ್ ಪದ್ಧತಿಯನ್ನು ರೂಪಿಸಬೇಕು. ಕೆಳಭಾಗದ ರೈತರಿಗೆ ನ್ಯಾಯಯುತವಾಗಿ ನೀರು ತಲುಪುವಂತೆ ಅಧಿಕಾ–ರಿಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಅಲ್ಲದೆ, ಚೈನ್ ನಂ. 230ರಲ್ಲಿ ಮಾಡಿರುವ ಕಟ್‌ಓಪನ್ ಹಾಗೂ ಚೈನ್ ನಂ. 308ರಲ್ಲಿ ಪೈಪ್ ಪಕ್ಕದಲ್ಲಿ ಉಂಟಾಗಿರುವ ದೊಡ್ಡ ಸೋ–ರಿಕೆ ಸೇರಿದಂತೆ ಕಾಲುವೆಯಲ್ಲಿನ ಅಕ್ರಮ ನೀರು ಬಳಕೆ ಮತ್ತು ಸೋರಿಕೆಗಳನ್ನು ಪರಿಶೀಲಿಸಿ ತಕ್ಷಣ ಸರಿಪಡಿಸಬೇಕು ಎಂದು ಮನವಿ ಮಾಡಲಾಗಿದೆ.

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಕೆಳಭಾಗದ ರೈತರಿಗೆ ನೀರು ಒದಗಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿ, ಸಂಬಂಧಪಟ್ಟ ಎಇಇ ವಿಜಯಲಕ್ಷ್ಮಿ ಅವರನ್ನು ವರ್ಗಾವಣೆ ಮಾಡಬೇಕು ಎಂಬ ಬೇಡಿಕೆಯನ್ನೂ ರೈತ ಸಂಘ ಮುಂದಿಟ್ಟಿದೆ.

ರೈತರ ಬೆಳೆಗಳನ್ನು ಉಳಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ನೀರಾವರಿ ಇಲಾಖೆ ತುರ್ತು ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸಬೇಕು. ಇಲ್ಲವಾದಲ್ಲಿ ರೈತರ ಹಿತದೃಷ್ಟಿಯಿಂದ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್ ಇಂಗಳದಾಳ, ರಾಜ್ಯ ಕಾರ್ಯದರ್ಶಿ ಸೂರುರಯ್ಯ ಆರ್ ಎಸ್ ಮಠ, ಯಂಕಪ್ಪ ಕಾರಬಾರಿ,ದೊಡ್ಡಬಸನಗೌಡ,ಪ್ರಭಾಕರ ಪಾಟೀಲ್, ಜಿಲ್ಲಾ ಕಾರ್ಯಾಧ್ಯಕ್ಷ ಬಸವರಾಜ ಮಾ.ಪಾ., ಲಿಂಗರೆಡ್ಡಿ ಪಾಟೀಲ್, ಬೂದಯ್ಯಸ್ವಾಮಿ,ಎ. ಗೋವಿಂದಪ್ಪ ನಾಯಕ, ಜಿಲ್ಲಾ ಉಪಾಧ್ಯಕ್ಷ ಹನುಮನಗೌಡ ಜಾಲಹಳ್ಳಿ, ವಿರೇಶ ಗವಿಗಟ್ಟು, ಸಿದ್ದಯ್ಯಸ್ವಾಮಿ ಗೊರ್ಕಲ್, ದೇವೇಂದ್ರಪ್ಪ ನಾಯಕ,ಶಂಕ್ರಪ್ಪ ದೇವತಗಲ್,ಹಾಜಿಮಸ್ತಾನ್,ದೇವ ರಾಜ ನಾಯಕ, ಸಿರವಾರ ತಾಲೂಕು ಅಧ್ಯಕ್ಷ ಶಂಕ್ರಪ್ಪ ದೇವತಗಲ್,ತಾ.ಪ ಕಾ. ಬಸವರಾಜ ನವಲಕಲ್ ಜಿಲ್ಲಾ ಮುಖಂಡ ದೊ. ದೇವೇಂದ್ರಪ್ಪ ನಾಯಕ, ಲಿಂಗಸಗೂರು ತಾಲೂಕು ಅಧ್ಯಕ್ಷ ಮಲ್ಲನಗೌಡ ಸೇರಿದಂತೆ ಹಲವು ರೈತರು ಭಾಗವಹಿಸಿದ್ದರು. ಶಾಂತಿಯುತ ಮನವಿ ಸಲ್ಲಿಕೆಯ ಸಂದರ್ಭದಲ್ಲಿ ಸಿ.ಪಿ.ಐ ಶಶಿಕಾಂತ್ ಎಂ. ಪಿ.ಎಸ್.ಐ ಚಂದ್ರಶೇಖರ್ ಹಿರೇಮಠ್ , ಹಾಗೂ ಪೊಲೀಸ್ ಸಿಬ್ಬಂದಿ ವರ್ಗದವರು ಭದ್ರತೆಗೆ ಉಪಸ್ಥಿತಿರಿದ್ದರು

ಸಾಹಿತ್ಯ ಸಿಂಚನ

ನಮ್ಮ ಸುಂದರ ಭೂಮಿ

ನೀಲಿ ಆಕಾಶದ ವಿಶಾಲ ಹೊದಿಕೆ,
ಹಸಿರು ಭೂಮಿಯ ಸುಂದರ ಅಲಂಕಾರ?
ಬೆಟ್ಟ–ಗುಡ್ಡಗಳ ಮನಮೋಹಕ ನೋಟ,
ಪ್ರಕೃತಿಯೇ ನೀಡಿದ ಅಮೂಲ್ಯ ಉಡುಗೊರೆ?

ಕಲಕಲ ಹರಿಯುವ ನದಿಯ ನೀರು,
ಹಾಡುತ್ತ ಹಾರುವ ಹಕ್ಕಿಗಳ ಗೀತೆ?
ಬಣ್ಣ ಬಣ್ಣದ ಹೂಗಳ ನಗು,
ನೋಡುವ ಮನದಲ್ಲಿ ಮೂಡುವ ಹರ್ಷವೇ
ತುಂಬು?

ಸೂರ್ಯೋದಯದ ಚಿನ್ನದ ಕಿರಣ,
ಸಂಜೆಯ ಹೊತ್ತಿನ ಕೆಂಪು ಬಾನ?
ಚಂದಿರನ ಬೆಳಕಿನ ತಂಪಾದ ರಾತ್ರಿ,
ನಮ್ಮ ಭೂಮಿಯ ಸೌಂದರ್ಯ ಎಷ್ಟು ಅದ್ಭುತ!

ಮರವೇ ನಮ್ಮ ಉಸಿರಿನ ಗೆಳೆಯ,
ನೀರೆ ನಮ್ಮ ಜೀವನದ ಆಶ್ರಯ
ಪ್ರಕೃತಿಯನ್ನು ಪ್ರೀತಿಯಿಂದ ಕಾಪಾಡಿದರೆ,
ಭೂಮಿ ಸದಾ ನಗುತ್ತಿರುತ್ತದೆ ನಮ್ಮೊಂದಿಗೆ?

ನಮ್ಮ ಭೂಮಿ ನಮ್ಮ ತಾಯಿ,
ಅವಳ ಮಡಿಲೇ ನಮ್ಮ ನೆಲೆ?
ಸುಂದರ ಭೂಮಿಯನ್ನು ರಕ್ಷಿಸೋಣ,
ಮುಂದಿನ ಪೀಳಿಗೆಗೆ ಉಳಿಸೋಣ!

ರೈತ–ಕೂಲಿಕಾರ್ಮಿಕರ ಪಾದಯಾತ್ರೆಗೆ ಜಾಲಹಳ್ಳಿ ಗ್ರಾಮಸ್ಥರ ಬೆಂಬಲ

❑ ನೈಜ್ಯ ದೆಸೆ ನ್ಯೂಸ್

ಶುಂಕೇಶ್ವರಹಾಳ: ರೈತರು ಹಾಗೂ ಕೃಷಿ ಕೂಲಿಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರ್ಮಿಕರ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತಿರುವ ಪಾದಯಾತ್ರೆಗೆ ಜಾಲಹಳ್ಳಿ ಗ್ರಾಮದ ಹಿತೈಷಿಗಳು ಬೆಂಬಲ ಸೂಚಿಸಿದರು.



ಪಾದಯಾತ್ರೆಯು ಶುಂಕೇಶ್ವರಹಾಳ ಮಾರ್ಗವಾಗಿ ಸಾಗುತ್ತಿದ್ದ ಸಂದರ್ಭದಲ್ಲಿ ಜಾಲಹಳ್ಳಿ ಗ್ರಾಮದ ಹಿತೈಷಿಗಳಾದ ರಂಗಣ್ಣ ಕೋಲ್ಕಾರ, ಖುರ್ಷಿದ್ ಪಟೇಲ್, ಬಾಬಾ ಮೆಡಿಕಲ್ಸ್, ಲಿಂಗಣ್ಣ ಮಕಾಶಿ ಹಾಗೂ ಅಪ್ಪು ಪಾಲೀಲ್ ಅವರು ಪಾದಯಾತ್ರಿಗಳನ್ನು ಭೇಟಿ ಮಾಡಿ ಹಣ್ಣು ವಿತ–ರಿಸಿದರು. ಅಲ್ಲದೆ, ಪಾದಯಾತ್ರಿಗಳ ಆರೋಗ್ಯ ವಿಚಾರಿಸಿ, ರೈತರು ಮತ್ತು ಕೃಷಿ ಕೂಲಿಕಾರ್ಮಿಕರ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟಕ್ಕೆ ನೈತಿಕ ಬೆಂಬಲ ವ್ಯಕ್ತಪಡಿಸಿದರು. ರೈತರು ಹಾಗೂ ಕೃಷಿ ಕೂಲಿಕಾರ್ಮಿಕರ ವಿವಿಧ ಬೇಡಿಕೆಗಳು ಈಡೇರಬೇಕು ಎಂಬ ಆಶಯದೊಂದಿಗೆ ಪಾದಯಾತ್ರಿಗಳಿಗೆ ಪ್ರೋತ್ಸಾಹ ನೀಡಿದ ಗ್ರಾಮದ ಹಿತೈಷಿಗಳ ಕಾರ್ಯಕ್ಕೆ ಸಂಘಟನೆಯ ಮುಖಂಡರು ಕೃತಜ್ಞತೆ ಸಲ್ಲಿಸಿದರು.

ಸೌರಭ ಸಾಂಸ್ಕೃತಿಕ ಕಲಾ ಬಳಗದ ವಾರ್ಷಿಕೋತ್ಸವಕ್ಕೆ ಸಿದ್ಧತೆ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಸೌರಭ ಸಾಂಸ್ಕೃತಿಕ ಕಲಾ ಬಳಗ ಹಿರೇಮನ್ನಾಪುರ ಸಂಸ್ಥೆಯ ವತಿಯಿಂದ ಕುಷ್ಟಗಿ ನಗರದ ಶ್ರೀ ಬುತ್ತಿ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಸಂಸ್ಥೆಯ ವಾರ್ಷಿಕೋತ್ಸವದ ಪೂರ್ವಭಾವಿ ಸಭೆ ಜರುಗಿತು.



ಸಭೆಯಲ್ಲಿ ಸಂಸ್ಥೆಯ ವಾರ್ಷಿಕೋತ್ಸವವನ್ನು ಯಶಸ್ವಿಯಾಗಿ ಆಯೋಜಿಸುವ ಕುರಿತು ಪದಾಧಿಕಾ–ರಿಗಳು ಚರ್ಚೆ ನಡೆಸಿದರು. ವಾರ್ಷಿಕೋತ್ಸವದ ಅಂಗವಾಗಿ ಸಂಸ್ಥೆಗೆ ನೂತನ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವುದು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಕರೋಕೆ ಗಾಯನ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳುವ ಕುರಿತು ಸಮಾಲೋಚನೆ ನಡೆಸಲಾಯಿತು. ಸಭೆಯಲ್ಲಿ ಚರ್ಚಿಸಿದ ಬಳಿಕ 2026ರ ಡಿಸೆಂಬರ್ 6ರಂದು ಭಾನುವಾರ ಬೆಂಗಳೂರಿನಲ್ಲಿ ಸಂಸ್ಥೆಯ ವಾರ್ಷಿಕೋತ್ಸವವನ್ನು ಆಚರಿಸಲು ಸರ್ವಾನುಮತದಿಂದ ನಿರ್ಧರಿಸಲಾಯಿತು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವ ಕುರಿತು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ರೆಹಮಾನ್ ಸಾಬ್ ಹೆಚ್. ಕೋಳೂರು, ಉಪಾಧ್ಯಕ್ಷರಾದ ಭೀಮಸೇನರಾವ್ ಕುಲಕರ್ಣಿ, ಖಜಾಂಚಿ ಹುಸೇನ್ ಭಾಷಾ ಮುಜಾವರ, ಸದಸ್ಯರಾದ ಶರಣಯ್ಯ ಪೊಲೀಸ್ ಪಾಟೀಲ್, ವಿರೂಪಾಕ್ಷಪ್ಪ ದೇಸಾಯಿ ಹಾಗೂ ಮುದಕಪ್ಪ ಕನ್ನಾಳ ಉಪಸ್ಥಿತರಿದ್ದರು.

ರಂಗಭೂಮಿ ನಾಟಕ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ: ನಾಗರಾಜ ಪತ್ತಾರ್ ಅಭಿಪ್ರಾಯ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಾಟಕವನ್ನು ಕೇವಲ ನೋಡುವುದಕ್ಕೆ ಮಾತ್ರ ಸೀಮಿತಗೊಳಿಸದೆ, ಅದರ ಸಂದೇಶವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳೋಣ, ನಾಟಕವೆಂದರೆ ನಮ್ಮೊಳಗಿನ ಮನುಷ್ಯತ್ವವನ್ನು ಜಾಗೃತಗೊಳಿಸುವ ಮಧ್ಯಮ ಸಂಬಂಧಗಳು ಸೋರುತ್ತಿರುವ ಕಾಲದಲ್ಲಿ ಪ್ರೀತಿ, ವಿಶ್ವಾಸ ಮತ್ತು ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಇಂದು ಪ್ರದರ್ಶನಗೊಂಡ 'ಸೋರುತಿಹುದು ಸಂಬಂಧ ' ನಾಟಕದ ಮಹತ್ವದ ಸಂದೇಶ ಸಾರುತ್ತದೆ ಎಂದು ರಂಗಕರ್ಮಿ, ನಾಟಕ ನಿರ್ದೇಶಕ ನಾಗರಾಜ ಪತ್ತಾರ್ ಅಭಿಪ್ರಾಯ ಪಟ್ಟರು.



ತಾಲೂಕಿನ ತುರ್ವಿಹಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಮತ್ತು ಕಾಲೇಜಿನ ಸಾಂಸ್ಕೃತಿಕ ಸಮಿತಿಯ ಸಹಯೋಗದಲ್ಲಿ ನಡೆದ "ಸೋರುತಿಹುದು ಸಂಬಂಧ" ಎಂಬ ನಾಟಕದ ಸಮಾರೋಪ ಸಮಾರಂಭ ಮತ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ, ನಾಟಕ ಕೇವಲ ಮನರಂಜನೆಯ ಸಾಧನವಲ್ಲ, ಅದು ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಮತ್ತು ಸಮಾಜವನ್ನು ಆತ್ಮಾವಲೋಕನಕ್ಕೆ ಒಳಪಡಿಸುವ ಶಕ್ತಿಯುತ ಕಲಾಮಾಧ್ಯಮವಾಗಿದೆ. ಮನುಷ್ಯರ ನಡುವಿನ ಪ್ರೀತಿ, ವಿಶ್ವಾಸ, ಗೌರವ, ಸಹಾನುಭೂತಿ ಹಾಗೂ ಪರಸ್ಪರ ಸಹಕಾರದ ಮಹತ್ವವನ್ನು ನಾಟಕ ಪರಿಣಾಮಕಾರಿಯಾಗಿ ತಿಳಿಸುತ್ತದೆ.

ಇಂದಿನ ಆಧುನಿಕ ಜೀವನದಲ್ಲಿ ತಂತ್ರಜ್ಞಾನ ಬೆಳೆದಂತೆ ಮನುಷ್ಯರ ನಡುವಿನ ಭಾವನಾತ್ಮಕ ಅಂತರವೂ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಕುಟುಂಬದ ಸಂಬಂಧಗಳು, ಸ್ನೇಹ, ಆತ್ಮೀಯತೆ ಮತ್ತು ಸಾಮಾಜಿಕ ಬಾಂಧವ್ಯಗಳು ದುರ್ಬಲಗೊಳ್ಳುತ್ತಿರುವ ಸಂದರ್ಭದಲ್ಲಿ ನಾಟಕವು ಮನುಷ್ಯನನ್ನು ಮನುಷ್ಯನಿಗೆ ಹತ್ತಿರ ಮಾಡುವ ಕಾರ್ಯವನ್ನು ಮಾಡುತ್ತದೆ ಎಂದು ಅಭಿಪ್ರಾಯ ಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ್ ಡಾ.ಕೆ.ಖಾದರ್ ಭಾಷಾ ಮಾತನಾಡಿ, ಸಂಬಂಧಗಳನ್ನು ಕಟ್ಟುವುದು ಬದುಕಿನ ಕಲೆ, ಉಳಿಸುವುದು ಮಾನವೀಯತೆ, ಆ ಮಾನವೀಯತೆಯನ್ನು ಜಾಗೃತಗೊಳಿಸುವುದೇ ನಾಟಕದ ಕಲೆ, ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸುವ "ಸೋರುತಿಹುದು ಸಂಬಂಧ" ನಾಟಕವು ಸಂಬಂಧಗಳ ಮಹತ್ವವನ್ನು ಅರಿಯಲು, ಮಾನವೀಯ ಮೌಲ್ಯಗಳನ್ನು ಗುರುತಿಸಲು ಹಾಗೂ ನಮ್ಮ ಬದುಕಿನ ಸಂಬಂಧಗಳ ಕುರಿತು ಚಿಂತಿಸಲು ಪ್ರೇರಣೆ ನೀಡುತ್ತದೆ. ನಾಟಕದ ಪಾತ್ರಗಳು ಮತ್ತು ಘಟನೆಗಳು ಪ್ರೇಕ್ಷಕರ ಮನಸ್ಸನ್ನು ತಟ್ಟಿದಾಗ, ಅವು ಕೇವಲ ರಂಗಮಂಚಕ್ಕೆ ಸೀಮಿತ ಆಗದೆ ನಮ್ಮ ಬದುಕಿನ ಭಾಗವಾಗುತ್ತವೆ.

ಆದ್ದರಿಂದ ನಾಟಕವು ಸಮಾಜದ ಸಮಸ್ಯೆಗಳನ್ನು ಬಿಂಬಿಸುವ ಕನ್ನಡಿಯಷ್ಟೇ ಅಲ್ಲ, ಸಂಬಂಧಗಳನ್ನು ಬೆಸೆಯುವ ಸೇತುವೆಯೂ ಹೌದು, ವಿದ್ಯಾರ್ಥಿಗಳಲ್ಲಿ ಕಲಾಭಿರುಚಿ ಬೆಳೆಸುವುದರ ಜೊತೆಗೆ ಸಾಮಾಜಿ–ಕ ಜವಾಬ್ದಾರಿ, ಸಹಬಾಳ್ವೆ ಮತ್ತು ಮಾನವೀಯ ಕಾಳಜಿಯನ್ನು ಬೆಳೆಸುವಲ್ಲಿ ನಾಟಕ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ನಾಟಕ ನಿರ್ದೇಶನ ಮಾಡಿದ ನಾಗರಾಜ ಪತ್ತಾರ್ ಮತ್ತು ಸಂಗೀತ ನಿರ್ದೇಶಕಿ ಗೀತಾ ಸಿದ್ದಿಯವರಿಗೆ ಕಾಲೇಜು ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾಲೇಜಿನ ವಿದ್ಯಾರ್ಥಿಗಳಿಂದ 'ಸೋರುತಿಹುದು ಸಂಬಂಧ' ಎಂಬ ನಾಟಕದ ಪ್ರದರ್ಶನ ನಡೆಯಿತು. ಈ ಕಾರ್ಯಕ್ರಮದ ಕುರಿತು ಸಾಂಸ್ಕೃತಿ–ಕ ಚಿಂತಕರಾದ ಮಹೇಶ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಪ್ರಾಸ್ತಾವಿಕ ಸಾಂಸ್ಕೃತಿ–ಕ ಸಮಿತಿ ಸಂಚಾಲಕ ಮೌಲಾಸಾಬ್, ಹಾಗೂ ಸಹಾಯಕ ಪ್ರಾಧ್ಯಾಪಕ ಡಾ.ಚನ್ನಬಸವ, ಉಪನ್ಯಾಸಕರ ಡಾ.ಹುಸೇನಸಾಬ್, ನರಸಣ್ಣ ಹಾಗೂ ಕಾಲೇಜಿನ ಎಲ್ಲಾ ಅಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು. ನಿರೂಪಣೆ ಕ–ರಿಯಪ್ಪ, ಸ್ವಾಗತ ಗಂಗಮ್ಮ ವಂದನಾರ್ಪಣೆ ಈರಮ್ಮ, ಪ್ರಾರ್ಥನೆ ಅನಿತಾ, ನೆರವೇರಿಸಿದರು.

ಅ.24 ವಿಶ್ವ ಪೋಲಿಯೊ ದಿನಾಚರಣೆ ಪೋಲಿಯೊ ಮುಕ್ತ ಜಗತ್ತು ನಿರ್ಮಿಸಲು ಸಂಕಲ್ಪ: ಡಾ.ಕೋನಿಕಾ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಪ್ರತಿ ವರ್ಷ ಅ.24ರಂದು ವಿಶ್ವ ಪೋಲಿಯೊ ದಿನವನ್ನು ಆಚರಿಸಲಾಗುತ್ತದೆ. ಪೋಲಿಯೊ ಮುಕ್ತ ಜಗತ್ತನ್ನು ನಿರ್ಮಿಸುವ ಸಂಕಲ್ಪದೊಂದಿಗೆ ಮತ್ತು ಪೋಲಿಯೊ ರೋಗದ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಮೀಸಲಿಡಲಾಗಿದೆ. ಮೊದಲು ಪೋಲಿಯೊ ಲಸಿಕೆ ಅಭಿವೃದ್ಧಿ ಪಡಿಸಿದ ಡಾ.ಜೋನಾಸ್ ಸಾಲ್ಕ್ ಅವರ ಜನ್ಮದಿನದ ನೆನಪಿಗಾಗಿ 'ರೋಟರಿ ಇಂಟರ್ ನ್ಯಾಷನಲ್' ಸಂಸ್ಥೆ ಈ ದಿನಾಚರಣೆಯನ್ನು ಆಚರಣೆಗೆ ತಂದರು ಎಂದು ಸಮುದಾಯ ಆರೋಗ್ಯ ಕೇಂದ್ರದ ಅರವಳಿಕೆ ತಜ್ಞರಾದ ಡಾ.ಕೋನಿಕಾ ಹೇಳಿದರು.



ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು, ಸಮುದಾಯ ಆರೋಗ್ಯ ಕೇಂದ್ರ ತುರ್ವಿಹಾಳ ಸನ್ ರೈಸ್ ಪ್ಯಾರಮೆಡಿಕಲ್ ಕಾಲೇಜ್ ಸಿಂಧನೂರು ಇವರ ಸಯುಕ್ತಾಶ್ರಯದಲ್ಲಿ ವಿಶ್ವ ಪೋಲಿಯೋ ದಿನಾಚರಣೆ ಹಮ್ಮಿಕೊಂಡು ಮಾತನಾಡಿದ ಅವರು, ಪೋಲಿಯೊ ಎಂಬುದು ಪೋಲಿಯೊ ವೈರಸ್‌ನಿಂದ ಹರಡುವ ಅತ್ಯಂತ ಅಪಾಯಕಾರಿ ಸಾಂಕ್ರಾಮಿಕ ರೋಗ, ಇದು ಮುಖ್ಯವಾಗಿ 5 ವರ್ಷದೊಳಗಿನ ಮಕ್ಕಳ ನರಮಂಡಲದ ಮೇಲೆ ದಾಳಿ ಮಾಡಿ, ಶಾಶ್ವತ ಅಂಗವೈಕಲ್ಯ ಅಥ–'ವಾ ಪಾರ್ಶ್ವವಾಯು ಉಂಟು ಮಾಡುತ್ತದೆ.

ಇದಕ್ಕೆ ನಿಖರವಾದ ಚಿಕಿತ್ಸೆ ಇಲ್ಲದ ಕಾರಣ, ಲಸಿಕೆ ನೀಡುವುದು ಒಂದೇ ತಡೆಗಟ್ಟುವ ಮಾರ್ಗವಾಗಿದೆ ಎಂದು ತಿಳಿಸಿದರು.

ಡಾ.ವಿರೂಪಾಕ್ಷಪ್ಪ ಟಿ, ಆಯುಷ್ ವೈದ್ಯಾಧಿಕಾ–ರಿಗಳು ಸಮುದಾಯ ಆರೋಗ್ಯ ಕೇಂದ್ರ ತುರ್ವಿಹಾಳ ಮಾತನಾಡಿ, ಒಂದು ಕಾಲದಲ್ಲಿ ವಿಶ್ವದ ಒಟ್ಟು ಪೋಲಿಯೊ ಪ್ರಕರಣಗಳಲ್ಲಿ ಅರ್ಧದಷ್ಟು ಭಾರತದಲ್ಲೇ ವರದಿಯಾಗುತ್ತಿದ್ದವು. ಆದರೆ ಭಾರತ ಸರ್ಕಾರದ 'ಪಲ್ಸ್ ಪೋಲಿಯೊ ಅಭಿಯಾನ' ಹಾಗೂ ಆರೋಗ್ಯ ಕಾರ್ಯಕರ್ತರ ಸತತ ಪರಿಶ್ರಮದಿಂದಾಗಿ 2011ರ ಜನವ–ರಿಯ ನಂತರ ದೇಶದಲ್ಲಿ ಯಾವುದೇ ಹೊಸ ಪೋಲಿಯೊ ಪ್ರಕರಣ ವರದಿಯಾಗಿಲ್ಲ.

ಪರಿಣಾಮವಾಗಿ, 2014ರ ಮಾರ್ಚ್‌ನಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಭಾರತವನ್ನು ಅಧಿಕೃತವಾಗಿ "ಪೋಲಿಯೊ ಮುಕ್ತ ದೇಶ" ಎಂದು ಘೋಷಿಸಿತು. ಜಗತ್ತಿನಿಂದ ಪೋಲಿಯೊ ಸಂಪೂರ್ಣವಾಗಿ ನಿರ್ಮೂಲನೆಯಾಗುವವರೆಗೆ ಪ್ರತಿಯೊಬ್ಬರೂ ಎಚ್ಚರದಿಂದಿರಬೇಕು ಮತ್ತು 5 ವರ್ಷದೊಳಗಿನ ಪ್ರತಿಯೊಂದು ಮಗುವಿಗೆ ತಪ್ಪದೆ ಪೋಲಿಯೊ ಲಸಿಕೆ ಹನಿಗಳನ್ನು ಹಾಕಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ: ಸನ್ ರೈಸ್ ಕಾಲೇಜಿನ ನರ್ಸಿಂಗ್ ಪ್ರಾಂಶುಪಾಲ ಲಾಜರ್ ಸಿರಿಲ್, ಪಿಎಚ್.ಸಿಒಗಳಾದ ಭಾಗ್ಯ, ದುರ್ಗಾ, ಶರಣಮ್ಮ, ಪರಮೇಶ, ಎಚ್ಐಓ, ಆಶಾ ಕಾರ್ಯಕರ್ತೆಯರು, ಸನ್ ರೈಸ್ ಪ್ಯಾರಾ ಮೆಡಿಕಲ್ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಬಾಗಲವಾಡ ಜಿ.ಪಂ. ಕ್ಷೇತ್ರದಲ್ಲಿ ವಿಜಯರಾಣಿ ಸಿರವಾರ ಸ್ವತಂತ್ರ ಸ್ಪರ್ಧೆಗೆ ಸಜ್ಜು

ಎಸ್‌ಸಿ ಮಹಿಳಾ ಮೀಸಲಾತಿ ಪ್ರಕಟಣೆ ಬೆನ್ನಲ್ಲೇ ರಾಜಕೀಯ ಚಟುವಟಿಕೆ ಚುರುಕು

❑ ನೈಜ್ಯ ದೆಸೆ ನ್ಯೂಸ್

ಕವಿತಾಳ: ಜಿಲ್ಲಾ ಪಂಚಾಯಿತಿ ಚುನಾವಣೆಯ ಸಿದ್ಧತೆಗಳು ಗರಿಗೆದರಿರುವ ಬೆನ್ನಲ್ಲೇ, ಬಾಗಲವಾಡ ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ರಾಜಕೀಯ ಚಟುವಟಿಕೆಗಳು ಚುರುಕುಗೊಂಡಿವೆ. ಕ್ಷೇತ್ರವು ಅನುಸೂಚಿತ ಜಾತಿ (ಎಸ್‌ಸಿ) ಮಹಿಳೆಗೆ ಮೀಸಲಾಗಿರುವ ಹಿನ್ನೆಲೆಯಲ್ಲಿ, ಸಾಮಾಜಿ–ಕ ಹೋರಾಟಗಾರ್ತಿ ಹಾಗೂ ಮಹಾಶಕ್ತಿ ಮಹಿಳಾ ಸಬಲೀಕರಣ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷೆ ವಿಜಯರಾಣಿ ಸಿರವಾರ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿರುವುದು ಸ್ಥಳೀಯ ರಾಜ–ಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.



ಮಹಿಳಾ ಸಬಲೀಕರಣ, ಸಾಮಾಜಿಕ ನ್ಯಾಯ ಹಾಗೂ ಶೋಷಿತ ಸಮುದಾಯಗಳ ಹಕ್ಕುಗಳ ಪರವಾಗಿ ಕಳೆದ ಎರಡು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ವಿಜಯರಾಣಿ ಸಿರವಾರ ಅವರು, ತಮ್ಮ ಸಾಮಾಜಿಕ ಸೇವೆಯ ಅನುಭವವನ್ನು ಚುನಾವಣಾ ಕಣಕ್ಕೆ ತರುವ ಉದ್ದೇಶ ಹೊಂದಿದ್ದಾರೆ. ಮಹಾಶಕ್ತಿ ಮಹಿಳಾ ಸಬಲೀಕರಣ ಸಂಘಟನೆಯ ಮೂಲಕ ಮಹಿಳೆಯರಲ್ಲಿ ಸ್ವಾವಲಂಬನೆ, ಶಿಕ್ಷಣದ ಮಹತ್ವ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ರಾಜಕೀಯ ಪಕ್ಷಗಳ ಟಿಕೆಟ್ ಹಂಚಿಕೆ ಮತ್ತು ಅಭ್ಯರ್ಥಿಗಳ ಆಯ್ಕೆಯ ಲೆಕ್ಕಾಚಾರಗಳು ನಡೆಯುತ್ತಿರುವ ಸಂದರ್ಭದಲ್ಲಿ, ಯಾವುದೇ ರಾಜಕೀಯ ಪಕ್ಷದ ಬೆಂಬಲವಿಲ್ಲದೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಮುಂದಾಗಿರುವುದು ಕ್ಷೇತ್ರದ ಚುನಾವಣಾ ಸಮೀಕರಣಗಳ ಬಗ್ಗೆ ಕುತೂಹಲ ಮೂಡಿಸಿದೆ. ಆದರೆ, ಚುನಾವಣೆಯ ಅಂತಿಮ ಚಿತ್ರಣವು ಅಧಿಕೃತ ಅಧಿಸೂಚನೆ, ನಾಮಪತ್ರ ಸಲ್ಲಿಕೆ ಹಾಗೂ ಅಭ್ಯರ್ಥಿಗಳ ಅಂತಿಮ ಪಟ್ಟಿಯ ಬಳಿಕ ಸ್ಪಷ್ಟವಾಗಲಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ಗ್ರಾಮೀಣ ಪ್ರದೇಶಗಳಲ್ಲಿನ ಮೂಲಭೂತ ಸೌಕರ್ಯಗಳ ಸುಧಾರಣೆ, ಕುಡಿಯುವ ನೀರು, ರಸ್ತೆ, ಶಿಕ್ಷಣ ಸೇರಿದಂತೆ ಸಾರ್ವಜನಿಕ ಅಗತ್ಯಗಳಿಗೆ ಸ್ಪಂದಿಸುವುದು ಹಾಗೂ ಸರ್ಕಾರದ ಅಭಿವೃದ್ಧಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಳ್ಳುವುದು ತಮ್ಮ ಪ್ರಮುಖ ಆದ್ಯತೆಗಳಾಗಿವೆ ಎಂದು ವಿಜಯರಾಣಿ ಸಿರವಾರ ತಿಳಿಸಿದ್ದಾರೆ.

ತಳಮಟ್ಟದ ಸಮುದಾಯಗಳ ಹಕ್ಕುಗಳ ರಕ್ಷಣೆ ಮತ್ತು ಮಹಿಳೆಯರ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ದೊರಕಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಆಶಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಬಾಗಲವಾಡ ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ಮಹಿಳಾ ಸಂಘಟನೆಗಳು, ದಲಿತಪರ ಸಂಘಟನೆಗಳು ಹಾಗೂ ವಿವಿಧ ಸಾಮಾಜಿ–ಕ ವಲಯಗಳ ಬೆಂಬಲ ಚುನಾವಣೆಯಲ್ಲಿ ನಿರ್ಣಾಯಕವಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ವಿಜಯರಾಣಿ ಸಿರವಾರ ಅವರ ಸ್ವತಂತ್ರ ಸ್ಪರ್ಧೆಯ ನಿರ್ಧಾರವು ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೂ ಸವಾಲಾಗಬಹುದೇ ಎಂಬ ಚರ್ಚೆ ಆರಂಭವಾಗಿದೆ.

ಒಟ್ಟಾರೆ, ಮೀಸಲಾತಿ ಪ್ರಕಟಣೆಯ ಬೆನ್ನಲ್ಲೇ ಬಾಗಲವಾಡ ಕ್ಷೇತ್ರದಲ್ಲಿ ಚುನಾವಣಾ ಚಟುವಟಿಕೆಗಳು ಗರಿಗೆದರಿದ್ದು, ವಿಜಯರಾಣಿ ಸಿರವಾರ ಅವರ ಸ್ವತಂತ್ರ ಸ್ಪರ್ಧೆಯ ನಿರ್ಧಾರ ಮುಂದಿನ ದಿನಗಳಲ್ಲಿ ಕ್ಷೇತ್ರದ ರಾಜಕೀಯ ಬೆಳವಣಿಗೆಗಳಿಗೆ ಯಾವ ರೀತಿಯ ತಿರುವು ನೀಡಲಿದೆ ಎಂಬುದನ್ನು ಕಾದುನೋಡಬೇಕಿದೆ.

ಅನಾಥೆ ವೃದ್ಧೆಯ ಅಂತ್ಯಸಂಸ್ಕಾರ ಮಾಡುವ ಮೂಲಕ ಮಾನವೀಯತೆ ಮೆರೆದ ಭೂತಲದಿನ್ನಿ ಗ್ರಾಮಸ್ಥರು

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸುಮಾರು ವರ್ಷಗಳಿಂದ ಬೂತಲದಿನ್ನಿ ಗ್ರಾಮದಲ್ಲಿ ಆಶ್ರಯ ಪಡೆದಿದ್ದ ಸುಶೀಲಮ್ಮ (ಜೋಗಮ್ಮ) ವಯಸ್ಸು–73 ಇವರಿಗೆ ಭೂತಲದಿನ್ನಿಯ ಎಲ್ಲಾ ಗ್ರಾಮಸ್ಥರು ಸಹಾಯ ಸಹಕಾರದೊಂದಿಗೆ ಗ್ರಾಮದಲ್ಲಿ ಆಶ್ರಯ ನೀಡಿದ್ದರು. ಆದರೆ ಕೆಲವೇ ತಿಂಗಳುಗಳ ಹಿಂದೆಯಷ್ಟೇ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯ ಕೊಡಿಸಿದ್ದರು.



ಆದರೆ ಅವರ ಆರೋಗ್ಯದಲ್ಲಿ ಏರುಪೇರಾಗಿ ಅನಾರೋಗ್ಯದಿಂದ ಆಶ್ರಮದಲ್ಲಿ ಮರಣ ಹೊಂದಿದರು. ಈ ವಿಷಯವನ್ನು ತಿಳಿದ ಭೂತಲದಿನ್ನಿಯ ಗ್ರಾಮಸ್ಥರು ಆಶ್ರಮದಲ್ಲಿ ಆ ತಾಯಿಯ ವಿಧಿ ವಿಧಾನಗಳ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿ ಊರಿನ ಗ್ರಾಮಸ್ಥರ ಸಮಕ್ಷಮದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಈ ಸಮಯದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸುಶೀಲಮ್ಮ ಅವರು ನಮ್ಮ ಕಾರುಣ್ಯ ಕುಟುಂಬದ ಕೂಸಾಗಿ ನಮ್ಮ ಜೊತೆ ಕಳೆದಿರುವಂತಹ ದಿನಗಳನ್ನು ಮರೆಯಲಾಗುವುದಿಲ್ಲ. ಮತ್ತು ವಿಶೇಷವಾಗಿ ಹಲವಾರು ವರ್ಷಗಳಿಂದ ಭೂತಲದಿನ್ನಿಯ ಪ್ರತಿಯೊಬ್ಬ ಗ್ರಾಮಸ್ಥರು ಕೂಡ ಈ ತಾಯಿಯನ್ನು ಸ್ವಂತ ತಾಯಿಯಂತೆ ನೋಡಿಕೊಳ್ಳುತ್ತಿದ್ದರು.

ಇಂತಹ ಸೇವೆ ಮಾಡಿದ ಭೂತಲದಿನ್ನಿಯ ಎಲ್ಲಾ ಕರುಣಾಮಯಿ ಹೃದಯಗಳಿಗೆ ನಮ್ಮ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಅನಂತ ಕೋಟಿ ಕೋಟಿ ಪ್ರಣಾಮಗಳು. ಇಂದಿನ ಈ ತಾಯಿ ಅಂತ್ಯ ಸಂಸ್ಕಾರದಲ್ಲಿ ಊರಿನ ಎಲ್ಲಾ ಗುರುಹಿ–ರಿಯರುಗಳು ತಾಯಂದಿರುಗಳು ಭಾಗವಹಿಸಿ ದುಃಖವನ್ನು ವ್ಯಕ್ತಪಡಿಸಿದ ಕ್ಷಣಗಳು ಸುಶೀಲಮ್ಮ ಅವರು ಇವರುಗಳ ಹೃದಯ ಗೆದ್ದ ದೇವತೆ ಎಂದೆನಿಸುತ್ತದೆ. ಈ ತಾಯಿ ಆತ್ಮಕ್ಕೆ ಆ ಭಗವಂತ ನಿರಂತರ ಆತ್ಮ ಶಾಂತಿಯನ್ನು ಕರುಣಿಸಿ ಭೂತಲದಿನ್ನಿಯ ಸರ್ವ ಗ್ರಾಮಸ್ಥರಿಗೆ ಮತ್ತು ನಮ್ಮ ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬಕ್ಕೆ ಈ ತಾಯಿಯ ಅಗಲಿಕೆಯ ನೋವು ಭರಿಸುವಂತಹ ಶಕ್ತಿಯನ್ನು ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ಸುಶೀಲಮ್ಮ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಗಿದೆ ಎಂದು ಭಾವನಾತ್ಮಕವಾಗಿ ಮಾತನಾಡಿ ಅಂತ್ಯ ಸಂಸ್ಕಾರ ನೆರವೇರಿಸಿದರು.

ಈ ಸಮಯದಲ್ಲಿ ಬೂತಲದಿನ್ನಿ ಗ್ರಾಮಸ್ಥರುಗಳಾದ ಜಗನ್ನಾಥ ರೆಡ್ಡಿ. ಅಮರೇಗೌಡ. ಬಸವರಾಜ ಅಂಗಡಿ. ಶರಣಪ್ಪ. ಮುತ್ತನಗೌಡ. ಬಸಯ್ಯಸ್ವಾಮಿ. ರಹಿಮಾನ್ ಸಾಬ್. ಬಂದೇ ನವಾಜ್. ಖಾಜಾ ಹುಸೇನ್. ನಾಗರಾಜ ಸ್ವಾಮಿ. ಶೈಲಜಾ ಪಾಟೀಲ್.ನಾಗರಾಜ. ಕಾಳಿಂಗ ರೆಡ್ಡಿ. ಅಂಬಮ್ಮ. ರತ್ನಮ್ಮ. ಕಾಶಮ್ಮ. ಈರಮ್ಮ ಯಂಕಮ್ಮ ಮಹೇಶ್ವರಿ. ಯಂಕಮ್ಮ. ಅಮೃತ ಪಾರ್ವತಮ್ಮ. ಮಹಾಂತಮ್ಮ ಲಕ್ಷ್ಮಿ. ದೇವಮ್ಮ. ಗುಂಡಪ್ಪ ಶರಣಯ್ಯ ಸ್ವಾಮಿ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳ ಆಟ ಸಿದ್ದಯ್ಯ ಸ್ವಾಮಿ.ಮರಿಯಪ್ಪ. ವಿದ್ಯಾಶ್ರೀ. ಶಂಕ್ರಮ್ಮ ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಬೂತಲದಿನ್ನಿಯ ಅನೇಕರು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

DHFWS ಹಾಸನ ನೇಮಕಾತಿ 2026 ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ (Multi Purpose Worker) ಮತ್ತು ಫಾರ್ಮಸಿಸ್ಟ್ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಅಕ್ಟೋಬರ್ 20, 2026

DHFWS ಹಾಸನ ನೇಮಕಾತಿ 2026: ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು CHO ಹುದ್ದೆಗಳ ಒಟ್ಟು 24 ಖಾಲಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (DHFWS), ಹಾಸನವು ತನ್ನ ಅಧಿಕೃತ ಅಕ್ಟೋಬರ್ 2026ರ ಅಧಿಸೂಚನೆಯ ಮೂಲಕ ಸ್ಟಾಫ್ ನರ್ಸ್, ಬಹು ಉದ್ದೇಶದ ಕಾರ್ಯಕರ್ತ, ಫಾರ್ಮಸಿಸ್ಟ್ ಮತ್ತು CHO ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕೋರಿದೆ. ಕರ್ನಾಟಕ ಸರ್ಕಾರದ ಅಡಿಯಲ್ಲಿ, ಹಾಸನದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ನವೆಂಬರ್–2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ಜಾಲತಾಣ: hassan.nic.in

ರಾಜ್ಯದಲ್ಲಿ ಬೃಹತ್ ಕೈಗಾರಿಕೆ ಸ್ಥಾಪನೆಗೆ 400 ಎಕರೆ ಭೂಮಿ

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಸುಮಾರು 400 ಎಕರೆ ಭೂಮಿ ಒದಗಿಸಲು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಸ್ವಾಮ್ಯದ ಸಂಸ್ಥೆ ಆಟೋಮೋಟಿವ್ ರೀಸರ್ಚ್ ಅಸೋಷಿಯೇಷನ್ ಆಫ್ ಇಂಡಿಂ–ಯಾ (ಎಆರ್‌ಎಐ) ವತಿಯಿಂದ ನಿರ್ಮಾಣ ಮತ್ತು ಮೂಲ ಸೌಕರ್ಯಗಳ ಉಪಕರಣ ಪರೀಕ್ಷಾ ಕೇಂದ್ರ ಸ್ಥಾಪನೆಗೆ 100 ಎಕರೆ ಭೂಮಿಯನ್ನು ಕೇಳಲಾಗಿತ್ತು. ಈ ಉದ್ಯಮದಿಂದ ಹೆಚ್ಚಿನ ಉದ್ಯೋಗವಕಾಶಗಳು ಸೃಷ್ಟಿಯಾಗುವುದಿಲ್ಲ ಎಂಬ ಕಾರಣಕ್ಕೆ ತಾವು ಸಲಹೆ ನೀಡಿದ್ದು, 400 ನಿಂದ 500 ಎಕರೆ ಜಾಗವನ್ನು ಮೀಸಲಿಟ್ಟರೆ, ಬೇರೆ ಬೇರೆ ಕೈಗಾರಿಕೆಗಳು ಅಲ್ಲಿ ಸ್ಥಾಪನೆಯಾಗಲು ಸಾಧ್ಯ ಎಂಬ ಚರ್ಚೆಗಳಿವೆ. ಅದಕ್ಕಾಗಿ ಬೇರೆ ಬೇರೆ ಸ್ಥಳಗಳ ಪರಿಶೀಲನೆ ನಡೆಯುತ್ತಿದೆ ಎಂದರು. ಮುಖ್ಯಮಂತ್ರಿಯವರು ಒಂದು ಜಾಗವನ್ನು ಸಲಹೆ ಮಾಡಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರ್‌ಸ್ವಾಮಿಯವರು ತಮೊಂದಿಗೆ ಮಾತನಾಡಿದ್ದಾರೆ ಎಂದರು. ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾರೋಹಳ್ಳಿ ಜಾಗವನ್ನು ಸಲಹೆ ಮಾಡಿದ್ದರು.

ಅದರ ಪರಿಶೀಲನಾ ವರದಿ ಬಂದಿದೆ. ಉಳಿದಂತೆ ನೆಲಮಂಗಲ ಸೇರಿ ಮೂರು ಸ್ಥಳಗಳು ಪರಿಶೀಲನಾ ಹಂತದಲ್ಲಿವೆ ಎಂದು ಹೇಳಿದರು. ಶಿವಮೊಗ್ಗ ವಿಮಾನ ನಿಲ್ದಾಣದ ಸುತ್ತಾಮುತ್ತಾ ಗ್ರಾಮೀಣ ಭಾಗದ ಜಾಗವನ್ನು ಕೈಬಿಡುವ ಕುರಿತು ಚರ್ಚೆ ನಡೆಯುತ್ತಿದೆ. ಈ ಮೊದಲು 362 ಎಕರೆ ಜಾಗವನ್ನು ಸ್ವಾಧೀನಪಡಿಸೊಕೊಳ್ಳಲಾಗಿದೆ. ಅದರಲ್ಲಿ ಸುಮಾರು 4 ಎಕರೆ ಗ್ರಾಮೀಣ ಭಾಗಕ್ಕೆ ಸೇರಿದೆ.

ಅದನ್ನು ಹೊರತು ಪಡಿಸಿದರೆ, ಉಳಿದ ಯಾವ ಜಾಗವನ್ನು ಡಿನೋಟಿಫೈ ಮಾಡಲು ನಮ ಸರ್ಕಾರ ಸಿದ್ಧ ಇಲ್ಲ. ಮುಖ್ಯಮಂತ್ರಿಯವರು ಡಿ ನೋಟಿಫಿಕೇಷನ್ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದಾರೆ ಎಂದು ಹೇಳಿದರು. ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ 2027ರಲ್ಲಿ ನಡೆಯಲಿದೆ. ಈಗಾಗಲೇ ಜಪಾನ್, ಕೊರಿಯಾಗೆ ತೆರಳಿ ಅಲ್ಲಿನ ಉದ್ಯಮಿಗಳನ್ನು ಆಹ್ವಾನಿಸಲಾಗಿದೆ. ಅಮೆರಿಕಾ ಪ್ರವಾಸ ಮಾಡಬೇಕಿತ್ತು.

ಆಡಳಿತಾತಕ ಕೆಲಸಗಳು ಬಾಕಿ ಉಳಿಯುತ್ತವೆ ಎಂಬ ಕಾರಣಕ್ಕಾಗಿ ಪ್ರವಾಸವನ್ನು ಮುಂದೂಡಿದ್ದೇನೆ ಎಂದು ಹೇಳಿದರು. ದೇಶದಲ್ಲಿ ಮುಂಬೈ–ದೆಹಲಿಯಲ್ಲಿ ಈಗಾಗಲೇ ರೋಡ್ ಶೋ ನಡೆಸಲಾಗಿದೆ. ಗುಜರಾತ್ ಮತ್ತು ಪಶ್ಚಿಮ ಬಂಗಾಲದಲ್ಲಿ ರೋಡ್‌ಶೋ ಬಾಕಿ ಇದೆ ಎಂದು ಹೇಳಿದರು.ನವೆಂಬರ್ 1ರಂದು ದೆಹಲಿ ಯಲ್ಲಿ ಎಸ್‌ಐಆರ್ ವಿರುದ್ಧ ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸಲು ತಮಗೆ ಸಾಧ್ಯವಾಗುತ್ತಿಲ್ಲ.

ಅಂದು ಕನ್ನಡ ರಾಜ್ಯೋತ್ಸವ, ಕಾರ್ಯಕ್ರದಮಲ್ಲಿ ಭಾಗವಹಿಸುತ್ತಿದ್ದೇನೆ ಎಂದು ತಿಳಿಸಿದರು. ಸ್ಪಿಂಗ್ ಆಪರೇಷನ್ ಬಗ್ಗೆ ತಾವು ಯಾವುದೇ ಹೇಳಿಕೆ ನೀಡುವುದಿಲ್ಲ. ಪ್ರಕರಣ ತನಿಖೆ ಹಂತದಲ್ಲಿದೆ. ಈ ಸಂದರ್ಭದಲ್ಲಿ ತಾವು ಮಾತನಾಡಲು ಬಯಸುವುದಿಲ್ಲ ಎಂದು ತಿಳಿಸಿದರು. ವಿಜಯಪುರ ಜಿಲ್ಲೆಯಲ್ಲಿ ಶಾಸಕರು ಹಾಗೂ ತಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಎಲ್ಲರೂ ಶಾಂತಿಯಿಂದಿದ್ದಾರೆ. ನಾನೂ ಕೂಡ ಶಾಂತಿಯಿಂದ ಇದ್ದೇನೆ ಎಂದು ಹೇಳಿದರು.

ಕಟಾವಿನ ಹೊತ್ತಿಗೆ ಕೈಕೊಟ್ಟ 'ಚಿತ್ತ': ಕಂಪ್ಲಿ ರೈತರ ಬದುಕಿನಲ್ಲಿ ತುಂಬಿದ ಕಣ್ಣೀರಿನ ಮಳೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ತುಂಗಭದ್ರೆಯ ಒಡಲು ಒಣಗಿ, ಮುಂಗಾರು ಕೈಕೊಟ್ಟಾಗಲೂ ಹಠ ಬಿಡದ ಕಂಪ್ಲಿ ತಾಲ್ಲೂಕಿನ ರೈತರು ಹನಿ ಹನಿ ನೀರನ್ನು ತಂದು ಭತ್ತದ ಸಸಿಗಳನ್ನು ಪ್ರೀತಿಯಿಂದ ಸಾಕಿ ಬೆಳೆಸಿದ್ದರು. ಈ ಬಾರಿ ಮಾರುಕಟ್ಟೆಯಲ್ಲಿ ಭತ್ತಕ್ಕೆ ಚಿನ್ನದಂತಹ ಬೆಲೆ ಸಿಗುತ್ತಿರುವುದನ್ನು ಕಂಡು, "ಇನ್ನೇನು ನಮ್ಮ ಸಾಲ ತೀರಿತು , ನಮ್ಮ ಬದುಕು ಹಸನಾಗಲಿದೆ" ಎಂದು ಮುಖದಲ್ಲಿ ಮಂದಹಾಸ ಬೀರಿದ್ದರು.

ಆದರೆ, ವಿಧಿಯ ಆಟ ಬೇರೆಯೇ ಇತ್ತು. ಶುಕ್ರವಾರ ಮಧ್ಯಾಹ್ನ ಅನಿರೀಕ್ಷಿತವಾಗಿರಾಗಿ ಸು–ರಿದ ಆ ಭೀಕರ 'ಚಿತ್ತ' ಮಳೆ, ಕೇವಲ ನೀರಾಗಿ ಬರಲಿಲ್ಲ; ರೈತರ ಬದುಕಿನ ಆಶಾಕಿರಣವನ್ನೇ ಹೊಸಕಿ ಹಾಕಿತು. ಕಟಾವಿಗೆ ಬಂದು ನಗುತ್ತಿದ್ದ ಭತ್ತದ ತೆನೆಗಳು ಭಾರಿ ಗಾಳಿಗೆ ಸಿಲುಕಿ ಅನಾಥ–'ವಾಗಿ ನೆಲಕ್ಕೊರಗಿವೆ. ಇನ್ನು ತಡರಾತ್ರಿಯವರೆಗೂ



ಬೆವರು ಸುರಿಸಿ ಕಷ್ಟಪಟ್ಟು ಬಯಲಿನಲ್ಲಿ ರಾಶಿ ಹಾಕಿದ್ದ ಭತ್ತದ ರಾಶಿಗಳು ಧಾರಾಕಾರ ಮಳೆಗೆ ತೋಯ್ದು ತೊಪ್ಪೆಯಾಗಿ ಕೆಸರು ಪಾಲಾಗಿವೆ. ತಮ್ಮ ಕಣ್ಣೆದುರೇ ಒದ್ದೆಯಾಗಿ ಬಣ್ಣಗೆಡುತ್ತಿರುವ ಭತ್ತದ ರಾಶಿಯನ್ನು ನೋಡಿ ಅನ್ನದಾತರ ಕಣ್ಣಲ್ಲಿ ರಕ್ತದ ಕಣ್ಣೀರು ಹರಿಯುತ್ತಿದೆ.

ಒದ್ದೆಯಾದ ಭತ್ತಕ್ಕೆ ಮಾರುಕಟ್ಟೆಯಲ್ಲಿ ಬೆಲೆ ಸಿಗುವುದಿಲ್ಲ, ಇಷ್ಟು ದಿನ ಪಟ್ಟ ಕಷ್ಟವೆಲ್ಲಾ ಮಣ್ಣು ಪಾಲಾಯಿತು ಎನ್ನುವ ರೈತರ ಒಡಲಾಳದ ಆಕ್ರಂದನ ಕಂಪ್ಲಿಯ ಮುಗಿಲು ಮುಟ್ಟಿದೆ. ಬಿರುಬಿಸಿಲಿನಿಂದ ಕಂಗೆಟ್ಟಿದ್ದ ಜನಸಾಮಾನ್ಯರಿಗೆ ಈ ಮಳೆ ತಂಪೆರೆದಿದ್ದರೂ, ಬೆಳೆ ಕಳೆದುಕೊಂಡ ಕೃಷಿಕನಿಗೆ ಮಾತ್ರ ಇದು ಜೀವಂತ ನರಕವನ್ನು ಸೃಷ್ಟಿಸಿದೆ. ಪ್ರಕೃತಿ ಮುನಿದಾಗ ಸರ್ಕಾರವೇ ರೈತನಿಗೆ ಬೆನ್ನೆಲುಬಾಗಿ ನಿಲ್ಲಬೇಕಾದದ್ದು ಧರ್ಮ.

ಕಂಪ್ಲಿ ತಾಲ್ಲೂಕಿನ ಈ ಭೀಕರ ಪರಿಸ್ಥಿತಿಯನ್ನು ಕಂಡು ಕರಗಬೇಕಾದ ಆಡಳಿತ ವ್ಯವಸ್ಥೆ ಇನ್ನು ಎಚ್ಚೆತ್ತುಕೊಂಡಿಲ್ಲ.

ಸರ್ಕಾರ ತಕ್ಷಣವೇ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಜಂಟಿ ಸಮೀಕ್ಷೆ ನಡೆಸಬೇಕು. ಕಣ್ಣೀರಲ್ಲಿ ಕೈ ತೊಳೆಯುತ್ತಿರುವ ಅನ್ನದಾತನಿಗೆ ಸೂಕ್ತ ವೈಜ್ಞಾನಿಕ ಪರಿಹಾರವನ್ನು ವಿಳಂಬವಿಲ್ಲದೆ ತಲುಪಿಸಬೇಕು. ಹಾಗೆಯೇ, ಒದ್ದೆಯಾದ ಭತ್ತವನ್ನು ವಿಶೇಷ ರಿಯಾಯಿತಿಯೊಂದಿಗೆ ಸರ್ಕಾರವೇ ನೇರವಾಗಿ ಖರೀದಿಸಲು ತುರ್ತು ಖರೀದಿ ಕೇಂದ್ರಗಳನ್ನು ತೆರೆಯಬೇಕು. ಇಲ್ಲದಿದ್ದರೆ, ದೇಶಕ್ಕೆ ಅನ್ನ ನೀಡುವ ಜೀವಗಳು ಸಾಲದ ಸುಳಿಗೆ ಸಿಲುಕಿ ಬೀದಿಗೆ ಬೀಳುವುದು ಗ್ಯಾರಂಟಿ.

ಬ್ರಿಟಿಷರ ವಿರುದ್ಧ ಗುಡುಗಿದ ಚೆನ್ನಮ್ಮನ ಶೌರ್ಯ ಮಹಿಳೆಯರಿಗೆ ಆದರ್ಶ: ಬಿ.ವಿ. ಗೌಡ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಬ್ರಿಟಿಷರ ದಾಸ್ಯದ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮ ಧೈರ್ಯ ಮತ್ತು ಸಾಹಸದ ಪ್ರತೀಕವಾಗಿದ್ದು, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅವರು ತೋರಿದ ಅಸಾಧಾರಣ ಶೌರ್ಯ ನಾಡಿನ ಪ್ರತಿಯೊಬ್ಬ ಮಹಿಳೆಗೂ ಆದ–'ರ್ಶಪ್ರಾಯವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಮತ್ತು ವೀರಶೈವ ಸಮಾಜದ ಯುವ ಮುಖಂಡ ಬಿ.ವಿ. ಗೌಡ ತಿಳಿಸಿದರು.

ಪಟ್ಟಣದ ತಹಸಿಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಸಹಯೋಗದಲ್ಲಿ ಏರ್ಪಡಿಸಿದ್ದ 'ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ' ಆಚ–'ರಣೆಯಲ್ಲಿ ರಾಣಿಯ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಅವರು ಮಾತನಾಡಿದರು. ಚೆನ್ನಮ್ಮ ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ಮತ್ತು ನಾಡಿನ ಒಳಿತಿಗಾಗಿ ಬ್ರಿಟಿಷರ ವಿರುದ್ಧ ಯುದ್ಧ ಸಾರಿದ ದೇಶದ ಪ್ರಥಮ ಮಹಿಳೆಯಾಗಿದ್ದಾರೆ. ಇಂತಹ ಧೀರ ರಮಣಿಯ ಜೀವನದ ಮೌಲ್ಯಗಳನ್ನು ಇಂದಿನ ಮಹಿಳೆಯರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ಹಾಗೂ ತಹಸಿಲ್ದಾರ್ ಜೂಗಲ್ ಮಂಜುನಾಯಕ ಮಾತನಾಡಿ, "ಆಧುನಿಕ ಜಗತ್ತಿನಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಬೇಕು.

ಶೋಷಣೆ ಮತ್ತು ಅನ್ಯಾಯದ ವಿರುದ್ಧ ಹೋರಾಡುವ ದೃಢ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು" ಎಂದು ಕರೆ ನೀಡಿದರು.



ಕಾರ್ಯಕ್ರಮದಲ್ಲಿ ಸಮಾಜದ ಪ್ರಮುಖ ಮುಖಂಡರಾದ ಜಿ. ಅಮರೇಗೌಡ, ಚನ್ನಬಸವ ಕೋರಿ, ಕನಕಗಿರಿ ರೇಣುಕಗೌಡ, ಟಿ.ಎಚ್. ಎಂ. ರಾಜಕುಮಾರ್ ಸೇರಿದಂತೆ ಕಂದಾಯ ಇಲಾಖೆಯ ಶಿರಸ್ತೇದಾರರಾದ ಎಸ್. ಕೆ. ರಮೇಶ್, ಜಿ. ಪಂಪಾಪತಿ, ಆಹಾರ ಇಲಾಖೆಯ ನಿರೀಕ್ಷಕ ವಿರೂಪಾಕ್ಷಗೌಡ ಹಾಗೂ ವೈಷ್ಣವಿ, ರಾಧಾ, ಟಿ. ಜ್ಯೋತಿ ಮತ್ತು ವಿವಿಧ ಸಮಾಜಗಳ ಗಣ್ಯರು ಉಪಸ್ಥಿತರಿದ್ದರು.

ದಕ್ಷಿಣ ಕಾಶಿ ನಂಜನಗೂಡಿನಲ್ಲಿ ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದೆ ಶಾಸಕ ದರ್ಶನ್ ಧ್ರುವನಾರಾಯಣ್

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಬಮೈಸೂರು ಜಿಲ್ಲೆ, ದಕ್ಷಿಣಕಾಶಿ ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವ ನಂಜನಗೂಡು ನಗರಸಭೆ ಕಚೇರಿ ಆವರಣದಲ್ಲಿ ಇಂದು ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದ ಶಾಸಕ ದರ್ಶನ್ ಧ್ರುವನಾರಾಯಣ್ ರವರು ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ಸೂಕ್ತ ಪರಿಹಾರ ದೊರಕಿಸಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಶಾಸಕರು ತಮ್ಮ ನಂಜನಗೂಡು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪಂಚಾಯಿತಿ ಮತ್ತು ಹೋಬಳಿ ಮಟ್ಟದಲ್ಲಿ



ಈಗಾಗಲೇ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸ್ತ್ರದಲ್ಲೇ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸ್ಥಳದಲ್ಲಿಯೇ ಸೂಕ್ತ ಪರಿಹಾರವನ್ನು ಗುರುತಿಸಿಕೊಳ್ಳುವ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಿದ್ದು ಅದೇ ರೀತಿ ಇಂದು ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲಿಯೇ ಸಣ್ಣಪುಟ್ಟ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಂಡರು.

ಇದೇ ವೇಳೆ ಅಧಿಕಾರಿಗಳೊಂದಿಗೆ ಮಾತನಾಡುತ್ತಾ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಕಚೇ–ರಿಗೆ ಬಂದರೆ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಅವರಿಗೆ ಸೂಕ್ತ ಪರಿಹಾರವನ್ನ ದೊರಕಿಸಿಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ , ತಹಸೀಲ್ದಾರ್ ಸ್ಮಿತಾ ರಾಮು, ನಗರಸಭೆ ಪೌರಾಯುಕ್ತ ಬಸವರಾಜ್, ಇಒ ಜೆರಾಲ್ಡ್ ರಾಜೇಶ್, ಮಾಜಿ ನಗರಸಭಾ ಅಧ್ಯಕ್ಷರಾದ ಶ್ರೀಕಂಠ ಸ್ವಾಮಿ, ನಗರ ಬ್ಲಾಕ್ ಅಧ್ಯಕ್ಷರಾದ ಸಿ.ಎಂ. ಶಂಕರ್, ಗಾಯತ್ರಿ ಮೋಹನ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು

ಹಡಪದ ಸಮಾಜಕ್ಕೆ ಚುನಾವಣೆಯಲ್ಲಿ ಟಿಕೆಟ್ ನೀಡದಿದ್ದರೆ ಚುನಾವಣೆ ಬಹಿಷ್ಕಾರ: ಭಾರತಿ ಅಪ್ಪಣ್ಣಸ್ವಾಮಿ ತಂಗಡಗಿ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಮುಂಬರಲಿರುವ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ನಮ್ಮ ಹಡಪದ ಸಮಾಜದ ಮುಖಂಡರಿಗೆ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಪಕ್ಷಗಳು ಟಿಕೆಟ್ ನೀಡುವ ಮೂಲಕ ನಮಗೂ ಸಾಮಾಜಿಕ ನ್ಯಾಯ ಒದಗಿಸಬೇಕು. ಒಂದು ವೇಳೆ ಕಡೆಗಣಿಸಿದ್ದೆಯಾದರೆ, ಮುಂಬರುವ ಎಲ್ಲಾ ಚುನಾವಣೆಗಳನ್ನು ಬಹಿಷ್ಕರಿಸಲಾಗುವುದು ಎಂದು ಅನ್ನದಾನ ಭಾರತಿ ಅಪ್ಪಣ್ಣ ಮಹಾಸ್ವಾಮಿ ಸುಕ್ಷೇತ್ರ ತಂಗಡಗಿ ಎಚ್ಚರಿಕೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಅ.24 ಶನಿವಾರದಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ರಾಜ್ಯದಲ್ಲಿ ಇಲ್ಲಿಯ ತನಕ ಅಧಿಕಾರ ನಡೆಸಿದ ವಿವಿಧ ರಾಜಕೀಯ ಪಕ್ಷದ ಸರ್ಕಾರಗಳು ನಮ್ಮ ಹಡಪದ ಸಮಾಜವನ್ನು ಕಡೆಗಣಿಸುತ್ತಾ ಬಂದಿವೆ, ಇದು ನಮಗೆ ನೋವಿನ ಸಂಗತಿಯಾಗಿದೆ. ರಾಜ್ಯದಲ್ಲಿ ಹಡಪದ ಜನಸಂಖ್ಯೆ 10ಲಕ್ಷಕ್ಕೂ ಹೆಚ್ಚು ಇದ್ದು, ಕಾಂಗ್ರೆಸ್, ಬಿಜೆಪಿ, ಹಾಗೂ ಜೆಡಿಎಸ್ ಪಕ್ಷಗಳು ಇತರೆ ಸಮಾಜಗಳಿಗೆ ನೀಡಿದಂತೆ ಹಡಪದ ಸಮಾಜಕ್ಕೆ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸೌಲಭ್ಯಗಳನ್ನು ನೀಡದೆ ನಿರ್ಲಕ್ಷ್ಯ ಮಾಡುತ್ತಲೆ ಬಂದಿವೆ. ಸಮಾಜದ ಬೇಡಿಕೆಗಳ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಕಾಲಾವಕಾಶ ಕೇಳಿ 6 ತಿಂಗಳಾದರು ಸಹ ಇನ್ನು ನಮಗೆ ಸಿಎಂ ಭೇಟಿಗೆ ಅವಕಾಶ ಸಿಗದೆ ಇರುವುದು ನೋವಿನ ಸಂಗತಿ, ಸಣ್ಣ ಸಮಾಜ ಎಂದು ನಮ್ಮನ್ನು ನಿರ್ಲಕ್ಷ್ಯ ಮಾಡುವುದು ಸರಿಯಲ್ಲ ಇದರ ಪರಿಣಾಮ ಮುಂದೆ ಅನುಭವಿಸಬೇಕಾಗುತ್ತದೆ.

ಹಡಪದ ಸಮಾಜಕ್ಕೆ 3ಎ ಜಾತಿ ಪ್ರಮಾಣ ಪತ್ರ ನೀಡುತ್ತಿದ್ದು, ಇದರಿಂದ ನಮಗೆ ಅನ್ಯಾಯವಾಗಿದೆ. 3ಎ ಬದಲಾಗಿ ಹಡಪದ ಸಮಾಜಕ್ಕೆ 2ಎ ಜಾತಿ ಪ್ರಮಾಣ ಪತ್ರ ನೀಡಬೇಕು ಎಂದು ಹಡಪದ ಸಮಾಜ ರಾಜ್ಯ ಅಧ್ಯಕ್ಷರಾದ ದೇವು ಮುಂಡರಗಿ ಸರ್ಕಾರವನ್ನು ಅಗ್ರಹ ಪಡಿಸಿದರು.

ಬಸವಣ್ಣ ಹಾಗೂ ಅವರ ತಾಯಿ ಸ್ಮಾರಕ ಅಭಿವೃದ್ಧಿ ಮಾಡಿದಂತೆ ಹಡಪದ ಅಪ್ಪಣ್ಣ ಹಾಗೂ ಅವರ ತಾಯಿ ಸ್ಮಾರಕ ಅಭಿವೃದ್ಧಿ ಮಾಡದೆ ಕಡೆಗಣಿಸಲಾಗಿದೆ ಇಲ್ಲಿ ಸಹ ಸರ್ಕಾರಗಳು ಶರಣ–



ರಲ್ಲಿ ಸಹ ಜಾತಿ ತಾರತಮ್ಯ ಮಾಡುತ್ತಿದೆ. ಹಿಂದಿನ ಸರ್ಕಾರ ಹಡಪದ ಅಪ್ಪಣ್ಣ ಅಭಿವೃದ್ಧಿ ನಿಗಮ ಮಾಡಿತ್ತು. ಆದರೆ ಅದಕ್ಕೆ ಯಾರನ್ನು ನೇಮಕ ಮಾಡದೆ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದ್ದು, ಎಲ್ಲಾ ಪಕ್ಷಗಳ ಮುಖಂಡರ ವಿರುದ್ಧ ಹಡಪದ ಸಮಾಜ ಮುಖಂಡರು ಅಸಮಾಧಾನ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ನಮ್ಮ ಸಮಾಜ–ಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಮೂಲಕ ಇತರೆ ಸಮಾಜದಂತೆ ನಮ್ಮ ಸಮಾಜ ಮುಂದೆ ಬರುವಂತೆ ಸಹಾಯ ಮಾಡುಬೇಕು ಎಂದರು.

ಈ ಸಂದರ್ಭದಲ್ಲಿ: ಸಮಾಜದ ಮುಖಂಡರಾದ ಸುರೇಶ ಕಿತ್ತೂರು, ಚಿದಾನಂದ.ಬಿ, ಶಶಿಕುಮಾರ ಬಳ್ಳಾರಿ, ಗದ್ದೆಪ್ಪ ಜಕ್ಕೇರಮಡ್ಡು, ಬಸವರಾಜ ಹರವಿ, ಅಮರೇಶ ಕನಸಾವಿ, ನಿಜಗುಣ, ಅಮರೇಶ ಕಾನಿಹಾಳ, ಮಹಾಬಳೇಶ್ವರ ಬಳಗಾನೂರು, ಎಂ.ಕಾಶಿನಾಥ, ಬೀಮಣ್ಣ ಬೆಳಗುರ್ಕಿ, ಸೇರಿದಂತೆ ಸಮಾಜದ ಮುಖಂಡರಿದ್ದರು.

ಕಾಲುವೆಗಳಿಗೆ ಸಮರ್ಪಕ ನೀರು ಹರಿಸಲು ಆಗ್ರಹಿಸಿ ರೈತರ ಪಾದಯಾತ್ರೆ – ಅ. 27ರಂದು ಜಿಲ್ಲಾಧಿಕಾರಿ ಕಚೇರಿ ಮುಂದೆ ಬೃಹತ್ ಪ್ರತಿಭಟನೆ

ರೈತರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಲಿ: ನರಸಿಂಗ್‌ರಾವ್ ಸರಕಿಲ್

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ರೈತರು ಹಾಗೂ ಕೃಷಿ ಕೂಲಿಕಾರ್ಮಿಕರ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಕಾರ ಸಂಘಟನೆಗಳು ರಾಯಚೂರು ಜಿಲ್ಲಾಧಿಕಾರಿ ಕಚೇ–ರಿವರೆಗೆ ಪಾದಯಾತ್ರೆ ಹಮ್ಮಿಕೊಂಡಿರುವುದು ಶ್ಲಾಘನೀಯ. ಸರ್ಕಾರಗಳು ಬರ ಪರಿಹಾರ ವಿತರಣೆಯಲ್ಲಿ ನಿರ್ಲಕ್ಷ್ಯ ವಹಿಸದೆ, ರೈತರ ಸಂಕಷ್ಟಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ನರಸಿಂಗ್‌ರಾವ್ ಸರಕಿಲ್ ಆಗ್ರಹಿಸಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಶನಿವಾರ ರೈತರು ಹಾಗೂ ಕೃಷಿ ಕೂಲಿಕಾರ್ಮಿಕರ ವಿವಿಧ ಬೇಡಿಕೆಗಳ ಈಡೇ–ರಿಕೆಗಾಗಿ ಹಮ್ಮಿಕೊಂಡಿದ್ದ ಪಾದಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಸರ್ಕಾರಗಳು ಬರ ಪರಿಹಾರ ವಿತರಣೆಯಲ್ಲಿ ವಿಳಂಬ ಹಾಗೂ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿರುವುದ–ರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.



ಮತ್ತೊಂದೆಡೆ, ಕಾಲುವೆಗಳಿಗೆ ವಾರಾಬಂದಿ ಪದ್ಧತಿ ಜಾರಿಗೊಳಿಸಿರುವುದರಿಂದ ಬೆಳೆಗಳು ಕಟಾವಿಗೆ ಬರುವ ಮೊದಲೇ ನೀರು ಸ್ಥಗಿತಗೊಳ್ಳುತ್ತಿದೆ. ಇದರಿಂದ ಅಪಾರ ಹಣ ಖರ್ಚು ಮಾಡಿ ಬೆಳೆ ಬೆಳೆದ ರೈತರು ನಷ್ಟ ಅನುಭವಿಸುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ರೈತರು ಹಾಗೂ ಕೃಷಿ ಕೂಲಿಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಸಂಘಟನೆಗಳು ಪಾದಯಾತ್ರೆ ಮೂಲಕ ಹೋರಾಟ ನಡೆಸುತ್ತಿರುವುದು ಪ್ರಶಂಸನೀಯ. ಇಂತಹ ಹೋರಾಟಗಳು ಸರ್ಕಾರದ ಗಮನ ಸೆಳೆದು ಜನರ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ಸಹಕಾರಿಯಾಗಲಿವೆ. ರೈತರು ಮತ್ತು ಕೃಷಿ ಕೂಲಿಕಾರ್ಮಿಕರ ನ್ಯಾಯಯುತ ಬೇಡಿಕೆಗಳು ಈಡೇರಲಿ ಹಾಗೂ ಪಾದಯಾತ್ರೆ ಯಶಸ್ವಿಯಾಗಲಿ ಎಂದು ಅವರು ಶುಭ ಹಾರೈಸಿದರು.

2,500 ಬರ ಪರಿಹಾರ ಯಾವುದಕ್ಕೂ ಸಾಲದು: ಶಬ್ಬಿರ್ ಜಾಲಹಳ್ಳಿ* ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ರಾಜ್ಯ ಕಾರ್ಯದರ್ಶಿ ಶಬ್ಬಿರ್ ಜಾಲಹಳ್ಳಿ ಮಾತನಾಡಿ, ರಾಜ್ಯ ಸರ್ಕಾರ ದೇವದುರ್ಗ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿದ್ದರೂ, ರೈತರಿಗೆ ಘೋಷಿಸಿರುವ ?2,500 ಪರಿಹಾರದ ಮೊತ್ತ ಒಂದು ಚೀಲ ಗೊಬ್ಬರ ಖರೀದಿಸಲೂ ಸಾಕಾಗುವುದಿಲ್ಲ. ರೈತರ ಸಂಕಷ್ಟಕ್ಕೆ ಸ್ಪಂದಿಸುವ ಬದಲು ಸರ್ಕಾರಗಳು ನಿರ್ಲಕ್ಷ್ಯ ವಹಿಸುತ್ತಿವೆ ಎಂದು ಆರೋಪಿಸಿದರು.

ಈ ಪಾದಯಾತ್ರೆಯಲ್ಲಿ ನಾಲ್ಕು ದಿಕ್ಕುಗಳಿಂದ ರೈತರು ಭಾಗವಹಿಸಲಿದ್ದು, ಅ. 27ರಂದು ರಾಯಚೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ 2,000ಕ್ಕೂ ಅಧಿಕ ರೈತರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು ತಿಳಿಸಿದರು. ನಾರಾಯಣಪುರ ಬಲದಂಡೆ ಕಾಲುವೆಗಳ ದುರಸ್ತಿಗಾಗಿ ನೂರಾರು ಕೋಟಿ ರೂಪಾಯಿ ಅನುದಾನ ವೆಚ್ಚ ಮಾಡಿದ್ದರೂ, ಕಾಲುವೆಗಳ ಕೊನೆಯ ಭಾಗದ ರೈತರಿಗೆ ಸಮರ್ಪಕವಾಗಿ ನೀರು ತಲುಪದಿರುವುದು ದುರದೃಷ್ಟಕರ.

ಬೆಳೆಗಳಿಗೆ ನೀರಿಲ್ಲದೆ ರೈತರು ಸಾಲದ ಸುಳಿಗೆ ಸಿಲುಕುವಂತಾಗಿದೆ. ಆದ್ದರಿಂದ ಪ್ರತಿ ರೈತನ 25 ಸಾವಿರ ಸಾಲ ಮನ್ನಾ ಮಾಡಬೇಕು ಹಾಗೂ ಬರ ಪರಿಹಾರವನ್ನು ಸಮರ್ಪಕವಾಗಿ ವಿತರಿಸಬೇಕು ಎಂದು ಒತ್ತಾಯಿಸಿದರು. ಹೋರಾಟಕ್ಕೆ ವಿವಿಧ ಸಂಘಟನೆಗಳ ಬೆಂಬಲ ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಮೌನೇಶ ಜಾಲಹಳ್ಳಿ, ಮಹಾಲಿಂಗ ದೊಡ್ಡಮನಿ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನಾಗರಾಜ ತೇಲ್ಕರ್, ರಾಜು ನಾಯಕ, ಸಂತೋಷ ತ್ಯಾಪ್ಲಿ, ಲಕ್ಷ್ಮಣ ಪರಪೂರ, ನಾಗರಾಜ ಪರಪೂರ, ಶರಣಪ್ಪ ಕಾರಲಗುಂಟಿ, ಚಂದ್ರಶೇಖರ, ನರೇಶ್, ಬಸವರಾಜ ಲಿಂಗದಹಳ್ಳಿ, ಹನುಮಂತ ಮಂಡಲಗುಡ್ಡ, ಬಸವರಾಜ ವಂದಲಿ, ವೆಂಕಟೇಶ ತ್ಯಾಪ್ಲಿ, ಮಲ್ಲಯ್ಯ, ಅಬ್ರಂ ಕಮಲದಿನ್ನಿ, ಹನುಮಂತ ಮಡಿವಾಳ, ರಂಗನಾಥ ಬುಂಕದೊಡ್ಡಿ, ನಾಗೇಂದ್ರ ಮಂಡಲಗುಡ್ಡ, ಮಾಂಶಯ್ಯ ದೊರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಚನ ದರ್ಶನ

ಶೂಲದ ಮೇಲಣ ವಿಭೋಗವೇನಾದಡೇನೊ?ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!ತನ್ನಾತ್ಮ ತನಗೆ ಹಗೆಯಾದ ಮತ್ತೆಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವಾ

"ಶೂಲದ ಮೇಲಣ ವಿಭೋಗವೇನಾದಡೇನೊ" ಎಂಬುದು ಭಕ್ತಿ ಭಂಡಾರಿ ಜಗಜ್ಯೋತಿ ಬಸವಣ್ಣನವರ ಒಂದು ಪ್ರಸಿದ್ಧವಾದ ವಚನವಾಗಿದೆ

ಶೂಲದ ಮೇಲಣ ವಿಭೋಗವೇನಾದಡೇನೊ?
ಮರಣದಂಡನೆಗೆ ಗುರಿಯಾಗಿ ಶೂಲದ (ಕತ್ತಿಯ ಮೊನೆ ಅಥ-ವಾ ಕಂಬದ) ಮೇಲೆ ನಿಂತಿರುವ ವ್ಯಕ್ತಿಗೆ ಎಂತಹ ರಾಜಭೋಗ, ರುಚಿಕರವಾದ ಊಟ ಅಥವಾ ಐಷಾರಾಮಿ ಸೌಲಭ್ಯಗಳನ್ನು ನೀಡಿದರೂ ಅದರಿಂದ ಏನು ಪ್ರಯೋಜನ? ಸಾವು ಎದು-ರಿಗಿರುವಾಗ ಆ ಭೋಗವೆಲ್ಲವೂ ವ್ಯರ್ಥ ಹಾಗೂ ಕ್ಷಣಿಕ.

ನಾನಾ ವರ್ಣದ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!
ಈ ಲೌಕಿಕ ಜಗತ್ತಿನ ಸಂಸಾರ ಮತ್ತು ಆಕರ್ಷಣೆಗಳು ಹಾವಾಡಿಗ ಹಾಗೂ ಹಾವಿನ ನಡುವಿನ ಸ್ನೇಹದ ಹಾಗೆ. ಹಾವಾಡಿಗನು ಹಾವನ್ನು ಎಷ್ಟು ಪ್ರೀತಿಯಿಂದ ಸಾಕಿದರೂ, ಅದು ಯಾವಾಗ ಕಚ್ಚಿ ಪ್ರಾಣ ತೆಗೆಯುತ್ತದೋ ತಿಳಿಯದು. ಹಾಗೆಯೇ ಸಂಸಾರದ ಸುಖವೂ ಯಾವಾಗ ದುಃಖವಾಗಿ ಕಾಡುತ್ತದೋ ಹೇಳಲಾಗದು.

ತನ್ನಾತ್ಮ ತನಗೆ ಹಗೆಯಾದ ಮತ್ತೆ ಬಿನ್ನಾಣವುಂಟೆ...?:
ಒಬ್ಬ ಮನುಷ್ಯನ ಸ್ವಂತ ಆತ್ಮವೇ (ಅವನ ಒಳಮನಸ್ಸು ಅಥವಾ ವಿವೇಕ) ಅವನಿಗೆ ಶತ್ರುವಾದ ಮೇಲೆ, ಅವನ ಬುದ್ಧಿವಂತಿ-ಕೆ ಅಥವಾ ಚಾತುರ್ಯದಿಂದ ಯಾವುದೇ ಪ್ರಯೋಜನವಿಲ್ಲ. ತನ್ನನ್ನು ತಾನು ಅರಿಯದವನಿಗೆ ಲೋಕದ ಜ್ಞಾನ ವ್ಯರ್ಥ.

ಮಹಾದಾನಿ ಕೂಡಲಸಂಗಮದೇವಾ ಬಸವಣ್ಣನವರು ತಮ್ಮ ಆರಾಧ್ಯ ದೈವವಾದ ಕೂಡಲಸಂಗಮದೇವನಲ್ಲಿ, ಇಂತಹ ಕ್ಷಣಿಕ ಸಂಸಾರದ ಮಾಯೆಯಿಂದ ತನ್ನನ್ನು ಪಾರುಮಾಡಿ ಒಳಿತನ್ನು ಕರುಣಿಸು ಎಂದು ಬೇಡಿಕೊಳ್ಳುತ್ತಾರೆ.
ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ಆಮೇಗತಿಯಲ್ಲಿ ನಡೆದ ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಕರ್ನಾಟಕವಿಧಾನಪರಿಷತ್ತಿನಈಶಾನ್ಯಶಿಕ್ಷಕರಕ್ಷೇತ್ರದ ಚುನಾವಣೆಗೆ ಇಂದು ಬೆಳಿಗ್ಗೆ 8 ಗಂಟೆಯಿಂದ ಮತದಾನ ಪ್ರಾರಂಭವಾಗಿದ್ದು, ಆರಂಭಿಕ ಹಂತದಲ್ಲಿ ಮತದಾನ ಆಮೆಗತಿಯಲ್ಲಿ ನಡೆಯುತ್ತಿದ್ದು . ಪಟ್ಟಣದ ಸಹಾಯಕ ಆಯುಕ್ತರ ಕಚೇರಿ ಬಳಿ ಶಿಕ್ಷಕರು ಸಾಲಾಗಿ ನಿಂತು ತಮ್ಮ ಹಕ್ಕು ಚಲಾಯಿಸುತ್ತಿದ್ದಾರೆ.



ಬಿಜೆಪಿಯ ಶಶೀಲ್ ಜಿ. ನಮೋಶಿ ಹಾಗೂ ಕಾಂಗ್ರೆಸ್‌ನ ಶರಣಪ್ಪ ಮಟ್ಟೂರು ಸೇರಿದಂತೆ ಒಟ್ಟು 13 ಅಭ್ಯರ್ಥಿಗಳು ಕಣದಲ್ಲಿದ್ದು, ಪ್ರಮುಖವಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ನ ನಡುವೆ ನೇರ ಪೈಪೋಟಿ ನಡೆಯುತ್ತಿದೆ . ಈಶಾನ್ಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಯಲ್ಲಿ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳು ಒಳಗೊಂಡಿವೆ. ಈ ಮತದಾನ ಸಂಜೆ 4 ಗಂಟೆಯವರೆಗೆ ನಡೆಯಲಿದ್ದು, ಶಿಕ್ಷಕ ಮತದಾರರು ಪ್ರಾಶಸ್ತ್ರದ ಮತದಾನದ ಮೂಲಕ ತಮ್ಮ ಆಯ್ಕೆಯನ್ನು ದಾಖಲಿಸಲಿದ್ದಾರೆ. ಮತ ಎಣಿಕೆ ಕಾರ್ಯವು ಅಕ್ಟೋಬರ್ 27ರಂದು ನಡೆಯಲಿದೆ .

ಕಂಪ್ಲಿಯಲ್ಲಿ ನವೆಂಬರ್‌ನಲ್ಲಿ ಮದ್ಯವರ್ಜನ ಶಿಬಿರ:

ಪೂರ್ವಭಾವಿ ಸಭೆ, ವ್ಯವಸ್ಥಾಪನಾ ಸಮಿತಿ ರಚನೆ

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ದುಶ್ಚಟ ಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನವೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳಲಿರುವ ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಭೆಯು ಇಲ್ಲಿನ ಯೋಜನಾ ಕಚೇರಿಯಲ್ಲಿ ಜರುಗಿತು. ಕಾರ್ಯಕ್ರಮದ ಯಶಸ್ವಿ ನಿರ್ವಹಣೆಗಾಗಿ 30 ರಿಂದ 35 ಜನ ಸದಸ್ಯರನ್ನೊಳಗೊಂಡ ವಿಶೇಷ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲಾಯಿತು. '

ಸಭೆಯಲ್ಲಿ ಪ್ರಾಥಮಿಕವಾಗಿ ಮಾತನಾಡಿದ ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶ್ರೀಯುತ ರೋಹಿತಾಕ್ಷ ಅವರು, "ಪರಮ ಪೂಜ್ಯರ ಮಾರ್ಗದರ್ಶನದಲ್ಲಿ ಕರ್ನಾಟಕದಾದ್ಯಂತ ಈಗಾಗಲೇ ಸುಮಾರು 2,146 ಮದ್ಯವರ್ಜನ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಈ



ಶಿಬಿರಗಳ ಮೂಲಕ ಸರಿಸುಮಾರು 1 ಲಕ್ಷದ 45 ಸಾವಿರಕ್ಕೂ ಅಧಿಕ ಕುಟುಂಬಗಳು ಮದ್ಯ ವ್ಯಸನದಿಂದ ಮುಕ್ತಿ ಪಡೆದು ನೆಮ್ಮದಿಯ ಜೀವನ ನಡೆಸುತ್ತಿವೆ" ಎಂದು ಕ್ಷೇತ್ರದ ಹಿನ್ನೆಲೆ ಹಾಗೂ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ನಂತರ ಕಲ್ಯಾಣ ಕರ್ನಾಟಕ ಪ್ರಾದೇಶಿಕ ವ್ಯಾಪ್ತಿಯ ಜನಜಾಗೃತಿ ಯೋಜನಾಧಿಕಾರಿಗಳಾದ ಶ್ರೀಯುತ ನಾಗೇಶ್ ಅವರು ಮಾತನಾಡಿ, ಮದ್ಯವರ್ಜನ ಶಿಬಿರದ ವಿಶೇಷತೆಗಳು, ಈವರೆಗಿನ ಶಿಬಿರಗಳಿಂದ ಸಮಾಜದಲ್ಲಾಗಿರುವ ಸಕಾರಾತ್ಮಕ ಬದಲಾವಣೆಗಳು ಹಾಗೂ ಮುಂಬರುವ ಶಿಬಿರಕ್ಕೆ ಮಾಡಿಕೊಳ್ಳಬೇಕಾದ ಅಗತ್ಯ ಸಿದ್ಧತೆಗಳ ಕುರಿತು ಸುದೀರ್ಘವಾಗಿ ವಿವರಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖ ಗಣ್ಯರಾದ ಎಸ್ ಎಂ ನಾಗರಾಜ, ಡಿ. ಮೌನೇಶ್, ವಾಲಿ ಕೊಟ್ರಪ್ಪ, ಡಿ.ವಿ. ಸುಬ್ಬರಾವ್, ಎಣ್ಣೆ ಚಂದ್ರಮೋಹನ್, ಎ.ಸಿ. ದಾನಪ್ಪ, ಚನ್ನಯ್ಯಸ್ವಾಮಿ, ವಾಗೀಶ್ ಕೆ.ಎಂ., ಡಿ.ಆರ್. ಮಂಜುನಾಥ್, ಗಿರೀಶ್, ಕುಮಾರ್, ಶ್ರೀಹರಿಕೃಷ್ಣ ಉಪಸ್ಥಿತರಿದ್ದರು. ಅಲ್ಲದೆ, ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರುಗಳಾದ ಡಾ. ವೆಂಕಟೇಶ್ ಭರಮಕ್ಕನವರ್, ವಾಗೀಶ್, ಚೇಗೂರು, ಷಣ್ಮುಖಪ್ಪ, ತಾಲೂಕು ಯೋಜನಾಧಿಕಾರಿ ಎಲ್. ರಾಘವೇಂದ್ರ, ಕೃಷಿ ಅಧಿಕಾರಿ ಎಸ್. ಬಿ. ಸಂಜುಕುಮಾರ್, ಮೇಲ್ವಿಚಾರಕರುಗಳಾದ ಮಂಜುಳಾ, ಮಂಜುನಾಥ ಹಾಗೂ ವಲಯದ ಸೇವಾಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಾಲುವೆಗಳಿಗೆ ವಾರಬಂದಿ ಪದ್ಧತಿ ಕೈಬಿಟ್ಟು, ನಿರಂತರ ನೀರು ಹರಿಸಲು ಆಗ್ರಹಿಸಿ ನಾಳೆ ಮಹಾತ್ ಸ್ವಾಮಿ

ವೃತ್ತದಿಂದ ನಾರಾಯಣಪುರ ಜಲಾಶಯದವರೆಗೆ ಬೃಹತ್ ಪಾದಯಾತ್ರೆ ಹಾಗೂ ಧರಣಿ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

ಹುಣಸಗಿ: ಭಾರತೀಯ ಕೃಷಿಕ ಸಮಾಜ (ನವದೆಹಲಿ) ಹುಣಸಗಿ ತಾಲೂಕು ಯುವ ಘಟಕದ ವತಿಯಿಂದ, ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿಗೆ ವಾರಬಂದಿ ಮೂಲಕ ನೀರು ಹರಿಸುವುದನ್ನು ಸಂಪೂರ್ಣವಾಗಿ ಕೈಬಿಟ್ಟು, ದಿನಾಂಕ 30/11/2026 ರವರೆಗೆ ಕಾಲುವೆಗಳಿಗೆ ನಿರಂತರವಾಗಿ ನೀರು ಹ-ರಿಸುವಂತೆ ಆಗ್ರಹಿಸಿ ನಾಳೆ ದಿನಾಂಕ 25/10/2026 ರಂದು ಬೃಹತ್ ಪ್ರಮಾಣದ ಪಾದಯಾತ್ರೆ ಹಾಗೂ ಧರಣಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಮಾಹಿತಿ ನೀಡಿರುವ



ಭಾರತೀಯ ಕೃಷಿಕ ಸಮಾಜದ ಹುಣಸಗಿ ತಾಲೂಕು ಯುವ ಘಟಕದ ಅಧ್ಯಕ್ಷರಾದ ಶ್ರೀ ಗುರುರಾಜ ಬಳೂರಗಿ ಅವರು, ನಾಳೆ ಮಹಾಂತ ಸ್ವಾಮಿ ವೃತ್ತದಿಂದ ಆರಂಭವಾಗಲಿರುವ ಈ ಪಾದಯಾತ್ರೆಯು ನಾರಾಯಣಪುರ ಜಲಾಶಯದವರೆಗೆ ಸಾಗಲಿದ್ದು, ನಂತರ ಅಲ್ಲಿ ಬೃಹತ್ ಪ್ರತಿಭಟನೆ ಮತ್ತು ಧರಣಿ ನಡೆಸಲಾಗುವುದು ಎಂದು ತಿಳಿಸಿದ್ದಾರೆ. ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿಗೆ ಜಾರಿಯಲ್ಲಿರುವ ವಾರಬಂದಿ ನೀರು ಹಂಚಿಕೆ ಪದ್ಧತಿಯನ್ನು ತಕ್ಷಣವೇ ಕೈಬಿಡಬೇಕು.

ರೈತರ ಬೆಳೆಗಳ ಹಿತಾಸಕ್ತಿ ದೃಷ್ಟಿಯಿಂದ ದಿನಾಂಕ 30/11/2026 ರವರೆಗೆ ಕಾಲುವೆಗಳಿಗೆ ಯಾವುದೇ ಅಡಚಣೆಯಿಲ್ಲದೆ ನಿರಂತರವಾಗಿ ನೀರು ಹರಿಸಬೇಕು.ಈ ಹೋರಾಟವು ಸಂಪೂರ್ಣವಾಗಿ ಪಕ್ಷಾತೀತ ಹಾಗೂ ಜಾತ್ಯತೀತವಾಗಿದ್ದು, ರೈತರ ಹಿತರಕ್ಷಣೆಗಾಗಿ ಹಮ್ಮಿಕೊಳ್ಳಲಾಗಿದೆ. ಹುಣಸಗಿ ಮತ್ತು ಸುರಪುರ ತಾಲೂಕಿನ ಎಲ್ಲ ಪರ ಸಂಘಟನೆಗಳು, ಮುಖಂಡರು ಮತ್ತು ಸಮಸ್ತ ರೈತ ಬಂಧುಗಳು ಈ ಪ್ರತಿಭಟನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ನೀರು ಹರಿಸುವ ಈ ಹೋರಾಟವನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ಕಳಕಳಿಯಿಂದ ಮನವಿ ಮಾಡಿಕೊಳ್ಳಲಾಗಿದೆ.

ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ: ಕಂಪ್ಲಿಯಲ್ಲಿ ಶೇ.94.44 ದಾಖಲೆ


ಮತದಾನ; ಜಿ. ಶಶಿಲ್ ನಮೋಶಿ –ಮಟ್ಟೂರು ನಡುವೆ ತೀವ್ರ ಪೈಪೋಟಿ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಕರ್ನಾಟಕ ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಅಂಗವಾಗಿ ಶುಕ್ರವಾರ ನಡೆದ ಚುನಾವಣೆ ಅತ್ಯಂತ ಶಾಂತಿಯುತ ಹಾಗೂ ಯಶಸ್ವಿಯಾಗಿ ಜರುಗಿದೆ. ಇಡೀ ತಾಲ್ಲೂಕಿನಲ್ಲಿ ಶಿಕ್ಷಕ ಮತದಾರರು ಜವಾಬ್ದಾ-ರಿಯುತವಾಗಿ ಪಾಲ್ಗೊಂಡಿದ್ದು, ಒಟ್ಟು ಶೇ.94.44 ರಷ್ಟು ದಾಖಲೆ ಮತದಾನ ದಾಖಲಾಗಿದೆ ಎಂದು ಕಂಪ್ಲಿ ತಹಸಿಲ್ದಾರ್ ಜೂಗಲ್ ಮಂಜುನಾಯಕ ಅವರು ಅಧಿಕೃತವಾಗಿ ಮಾಹಿತಿ ನೀಡಿದ್ದಾರೆ.

ಬೆಳಿಗ್ಗೆಯಿಂದಲೇ ಗರಿಗೆದರಿದ ಉತ್ಸಾಹ: ಸ್ಥಳೀಯ ಪುರಸಭೆ ಕಾರ್ಯಾಲಯದ ಆವರಣದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಮತದಾನ ಕೇಂದ್ರವನ್ನು ಸ್ಥಾಪಿಸಲಾಗಿತ್ತು. ಬೆಳಿಗ್ಗೆ 8 ಗಂಟೆಗೆ ಮತದಾನ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ, ಶಿಕ್ಷಕರು ಉತ್ಸಾಹದಿಂದ ಸರತಿ ಸಾಲಿನಲ್ಲಿ ನಿಂತು ತಮ್ಮ ಪ್ರಶಸ್ತ್ಯದ ಹಕ್ಕನ್ನು ಚಲಾಯಿಸಲು ಮುಂದಾದರು. ಮಧ್ಯಾಹ್ನದ ವೇಳೆಗೆ ಬಿರುಸು ಪಡೆದುಕೊಂಡ ಮತದಾನ ಪ್ರಕ್ರಿಯೆಯು ಸಂಜೆ 4 ಗಂಟೆಯವರೆಗೂ ನಿರಂತರವಾಗಿ ಸಾಗಿತು.

ಮತದಾನದ ಅಂಕಿ-ಅಂಶಗಳ ವಿವರ: ತಾಲ್ಲೂಕಿನಲ್ಲಿ ಈ ಬಾರಿ ಒಟ್ಟು 216 ಶಿಕ್ಷಕ ಮತದಾರರ ಹೆಸರನ್ನು ನಮೂದಿಸಲಾಗಿತ್ತು. ಇದರಲ್ಲಿ 138 ಪುರುಷ ಶಿಕ್ಷಕರು ಹಾಗೂ 78 ಮಹಿಳಾ ಶಿಕ್ಷಕಿಯರಿದ್ದರು. ಅಂತಿಮ ವರದಿಗಳ ಪ್ರಕಾರ, 133 ಪುರುಷ ಶಿಕ್ಷಕರು ಮತ್ತು 71 ಮಹಿಳಾ ಶಿಕ್ಷಕಿಯರು ಸೇರಿದಂತೆ ಒಟ್ಟು 204 ಮತದಾರರು ಮತ ಚಲಾಯಿಸಿದ್ದಾರೆ. ಕೇವಲ 12 ಮತದಾರರು ಮಾತ್ರ ಮತಗಟ್ಟೆಗೆ ಗೈರುಹಾಜರಾಗಿದ್ದರು. ಪ್ರಬುದ್ಧ ಮತದಾರರಾದ ಶಿಕ್ಷಕರು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿರುವುದು ಈ ಭಾಗದ ಪ್ರಜಾಪ್ರಭುತ್ವದ ಯಶಸ್ಸಿಗೆ ಸಾಕ್ಷಿಯಾಗಿದೆ.



ಕೊನೆ ಘಳಿಗೆಯವರೆಗೂ ಮುಖಂಡರ ಬಿರುಸಿನ ಮತಯಾಚನೆ: ಮತದಾನ ಕೇಂದ್ರದ 200 ಮೀಟರ್ ಪರಿಧಿಯ ಹೊರಗೆ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರ ದಂಡೇ ನೆರೆದಿತ್ತು. ಪ್ರಬಲ ಸ್ಪರ್ಧಿಗಳಾದ ಬಿಜೆಪಿಯ ಶಶೀಲ್ ಜಿ. ನಮೋಶಿ ಹಾಗೂ ಕಾಂಗ್ರೆಸ್‌ನ ಶರಣಪ್ಪ ಮಟ್ಟೂರು ನಡುವೆ ನೇರ ಪೈಪೋಟಿ ಏರ್ಪಟ್ಟಿದ್ದು, ಉಭಯ ಪಕ್ಷಗಳ ನಾಯಕರು ಕೊನೆಯ ಮತ ಬೀಳುವವರೆಗೂ ತೀವ್ರ ಕಸರತ್ತು ನಡೆಸಿದರು.
* ಕಾಂಗ್ರೆಸ್ ಪರ: ಕೆ. ಶ್ರೀನಿವಾಸರಾವು, ಕೆ.ಎಸ್. ಚಾಂದ್ ಬಾಷಾ, ಎನ್. ಹಬೀಬ್ಬಿ ರೆಹಮಾನ್, ಗೋಪಾಲ್, ಸಿದ್ದಪ್ಪ, ಮತ್ತು ಜಾಫರ್ ಸೇ-ರಿದಂತೆ ಪ್ರಮುಖರು ತಮ್ಮ ಪಕ್ಷದ ಅಭ್ಯರ್ಥಿಯ ಗೆಲುವಿಗಾಗಿ ಬಿರುಸಿನ ಪ್ರಚಾರ ನಡೆಸಿದರು.
* ಬಿಜೆಪಿ ಪರ: ಮುಖಂಡರಾದ ಅಳ್ಳಳ್ಳಿ ವೀರೇಶ್, ಸಿ.ಡಿ. ಮಹಾದೇವ, ಎಸ್.ಎಂ. ನಾಗರಾಜ, ರಬಿಯಾ ನಿಸ್ಸಾರ್, ಮುರಳಿ ಮೋಹನ್ ರೆಡ್ಡಿ, ಜಿ.ಜಿ. ಚಂದ್ರಣ್ಣ, ರಿಯಾಜ್, ಪ್ರಶಾಂತ್, ಬಡಿಗೇರ್ ವೀರೇಶ್ ಹಾಗೂ ಗೊರ್ತಿ ಶ್ರೀನಿವಾಸಲು ಅವರು ಪಕ್ಷದ ಅಭ್ಯರ್ಥಿ ಪರವಾಗಿ ಶಿಕ್ಷಕರ ಮನವೊಲಿಸಲು ಶ್ರಮಿಸಿದರು.

ಕಟ್ಟುನಿಟ್ಟಿನ ಭದ್ರತೆ ಮತ್ತು ಶಾಂತಿಯುತ ಸಮಾಪ್ತಿ: ಚುನಾವಣಾ ಆಯೋಗದ ನಿರ್ದೇಶನದಂತೆ ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡದಂತೆ ಕಂಪ್ಲಿ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಮತಗಟ್ಟೆಯ ಸುತ್ತಮುತ್ತ ವ್ಯಾಪಕ ಭದ್ರತೆ ನಿಯೋಜಿಸಿದ್ದರು. ಮತದಾನವು ಪೂರ್ಣಗೊಂಡ ಬಳಿಕ ಬ್ಯಾಲೆಟ್ ಪೆಟ್ಟಿಗೆಗಳನ್ನು ಕಟ್ಟುನಿಟ್ಟಿನ ಪೊಲೀಸ್ ಬಂದೋಬಸ್ತ್‌ನೊಂದಿಗೆ ಸುರಕ್ಷಿತ ಕೇಂದ್ರಕ್ಕೆ ರವಾನಿಸಲಾಯಿತು. ಅಕ್ಟೋಬರ್ 27 ರಂದು ಈ ಚುನಾವಣೆಯ ಅಧಿಕೃತ ಫಲಿತಾಂಶ ಹೊರಬೀಳಲಿದ್ದು, ಅಭ್ಯರ್ಥಿಗಳ ಭವಿಷ್ಯ ಸದ್ಯ ಮತಪೆಟ್ಟಿಗೆಯಲ್ಲಿ ಭದ್ರವಾಗಿದೆ.

ನೀರಿಗಾಗಿ ರಾಜ ಹೆದ್ದಾರಿಯನ್ನು ತಡೆದು ಉಗ್ರ ಹೋರಾಟ ಮಾಡಿದ ಬಿಜೆಪಿಯ ರಾಜ್ಯ ಉಪಾಧ್ಯಕ್ಷ ನರಸಿಂಹ ನಾಯಕ(ರಾಜುಗೌಡ)

ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಜಿಲ್ಲೆ ಸುರಪುರ ತಾಲೂಕಿನ ದೇವಪುರ ಕ್ರಾಸ್ ನಲ್ಲಿ ಶ್ರೀರಂಗಪಟ್ಟಣ. ಟು. ಬೀದರ್ ರಾಜ ಹೆದ್ದಾರಿಯನ್ನು ತಡೆದು ಉಗ್ರ ಹೋರಾಟ ಮಾಡಲಾಯಿತು. ಹೋರಾಟಕ್ಕೆ ಹಲವು ಪ್ರಗತಿಪರ ರೈತರು ಹಲವು ಸಂಘಟನೆಯ ಮುಖಂಡರು ಮತ್ತು ಹಲವು ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿರುವ ನರಸಿಂಹ ನಾಯಕ್ (ರಾಜುಗೌಡ) ಇವರು ಮಾತನಾಡಿ ಸರಕಾರಕ್ಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ-ರಿಗೆ ಹಾಗೆ ಸ್ಥಳೀಯ ಶಾಸಕರ ವಿರುದ್ಧ ಆಕ್ರೋಶಭರಿತವಾಗಿ ಮಾತನಾಡಿದರು.

ವಿಜಯಪುರ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಬಾಗಲಕೋಟೆ ಜಿಲ್ಲೆಯ ಜನಪ್ರತಿನಿಧಿಗಳು ಸೂರರನ್ನ ಬೇಕು ಎಂದು ಈ ಸಂದರ್ಭದಲ್ಲಿ ಹೇಳಿದರು. ಏನಕ್ಕೆ ಅವರಿಗೆ ಸೂರರ್ ಅನ್ನಬೇಕು ಅಂದರೆ. ಸಲಹೆ ಸಮಿತಿ ಮೀಟಿಂಗ್ ಆಗುವ ಎರಡು ದಿನ ಮುಂಚೆನೇ ಅವರೊಂದು ಗೈಡ್ ಲೆನ್ಸ್ ರೆಡಿ ಮಾಡಿಕೊಂಡು ಸರಕಾರಕ್ಕೆ ಮುಟ್ಟಿಸಿ ಅದೇ ಗೈಡ್ ಲೈನ್ಸ್ ಪ್ರಕಾರ ಸರಕಾರ ಸಲಹೆ ಸಮಿತಿ ಮೀಟಿಂಗ್ನಲ್ಲಿ ಅದೇ ರೀತಿಯಾಗಿ ಆದೇಶ ಮಾಡಬೇಕೆಂದು ಹೇಳುತ್ತಾರೆ ಆದರೆ ಗುಲ್ಬರ್ಗ ಜಿಲ್ಲೆ ಮತ್ತು



ಯಾದಗಿರಿ ಜಿಲ್ಲೆ ಹಾಗೆ ರಾಯಚೂರು ಜಿಲ್ಲೆಯ ಜನಪ್ರತಿನಿಧಿಗಳು ಯಾವುದೇ ನಮಗೆ ನೀರು ಬಿಡಿ ನೀರು ಬಿಡಿ ಅಂತ ಹೇಳಿ ಅಂತ ಅಷ್ಟೇ ಹೇಳುತ್ತಾರೆ ಆದರೆ ಇವರ ಹತ್ತಿರ ಯಾವುದೇ ಗೈಡ್ ಲೈನ್ಸ್ ಅನ್ನು ಮಾಡಿಕೊಳ್ಳದೆ ಮೀಟಿಂಗ್ನಲ್ಲಿ ಭಾಗವಹಿಸುತ್ತಾರೆ. ಇವರು ಯಾವ ಸೀಮೆಯ ಜನನಾಯಕರು ಅನ್ನುವುದೇ ನನಗೆ ಗೊತ್ತಾಗುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಿದ.

ಮತ್ತು ಇನ್ನೊಂದು ವಿಷಯ ಏನಪ್ಪಾ ಅಂದರೆ ಸ್ಥಳೀಯ ಶಾಸಕರು ಸಲಹೆ ಸಮಿತಿ ಮೀಟಿಂಗ್ನಲ್ಲಿ ಒಂದು ವಿಷಯದ ಬಗ್ಗೆಯೂ ಮಾತನಾಡದೆ ಇರುವುದು ನಮ್ಮ ಸುರಪುರ ತಾಲೂಕಿನ ರೈತ ಬಾಂಧವರ ದುರಾದೃಷ್ಟ ಸಂಗತಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು ಹಾಗೆ ಸುರಪುರದ ಶಾಸಕ-ರಿಗೆ ಪರೋಕ್ಷವಾಗಿ ವಿವಿಧ ಮಾತನಾಡಿದರು. ನಾನು ಮೊದಲು ಸುರಪುರದ ಶಾಸಕನಾಗಿ ಇದ್ದಾಗ ನನ್ನ ಕ್ಷೇತ್ರದ ರೈತ ಬಾಂಧವರಿಗೆ ಸಂಪೂರ್ಣವಾಗಿ ಎರಡು ಬೆಳೆಗೆ ನೀರನ್ನು ಹ-ರಿಸಿದ್ದೇನೆ ಆದರೆ ಈಗಿರುವ ಶಾಸಕರು ಒಂದೇ ಬೆಳೆಗೆ ನೀರನ್ನು ಕೊಡಲು ಸಾಧ್ಯವಾಗುತ್ತಿಲ್ಲ ಇವರು ಯಾವ ಸೀಮೆಯ ಶಾಸಕರು ಎಂದು ಪರೋಕ್ಷವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಶಾಸಕರಿಗೆ ಒಂದು ಟಿಎಂಸಿ ನೀರಿಗೆ ಎಷ್ಟು ಸಾವಿರಕ್ಕೆ ಕಿವ್ಸಿ ಎಕ್ಸ್ ಆಗುತ್ತದೆ ಎಂದು ಗೊತ್ತೇ ಇಲ್ಲ. ಆದರೆ ಎಷ್ಟು ಬಕೆಟ್ ಗಳಿಂದ ಒಂದು ಟಿಪ್ಪರ್ ಉಸುಗು ತುಂಬುತ್ತದೆ ಅನ್ನೋದು ಪ್ರಾಮಾಣಿಕವಾಗಿ ಗೊತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು.

ಮನವಿಯನ್ನು ಸ್ವೀಕಾರ ಮಾಡಲು ಬಂದಿರತಕ್ಕಂತ ಮಾನ್ಯ ಯಾದಗಿರಿ ಜಿಲ್ಲಾಧಿಕಾ-ರಿಗಳಿಗೆ ಹಾಗೆ ಯಾದಗಿರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಳಿಗೆ. ಈ ಸಂದರ್ಭದಲ್ಲಿ ನೀವು ನಮ್ಮ ಮನವಿಗೆ ಸ್ಪಂದಿಸಿ ನಮ್ಮ ರೈತರ ಹೊಲಗಳಿಗೆ ಸಂಪೂರ್ಣವಾಗಿ ವಾರಬಂದಿ ಪದ್ಧತಿಯನ್ನು ಕೈ ಬಿಟ್ಟು ಪೂರ್ಣ ಪ್ರಮಾಣದಲ್ಲಿ ನವಂಬರ್ 30ರವರೆಗೆ ನೀರನ್ನು ಹರಿಸಬೇಕು ಒಂದು ವೇಳೆ ನಮ್ಮ ಮನವಿಗೆ ನೀವು ಮತ್ತು ನಿಮ್ಮ ಸರಕಾರ ಏನಾದರೂ ಸ್ಪಂದಿಸದಿದ್ದರೆ ನಾವು ಮುಂದಿನ ದಿನಗಳಲ್ಲಿ ಬಸವಸಾಗರ ಅಣೆಕಟ್ಟು ನಾರಾಯಣಪುರ ಜಲಾಶಯಕ್ಕೆ ಮುತ್ತಿಗೆ ಹಾಕೊಳ್ಳಬಹುದು ಎಂದು ಅಧಿಕಾ-ರಿಗಳಿಗೆ ಮುಖಾಂತರ ಸರಕಾರಕ್ಕೆ ಎಚ್ಚರಿಸಿದರು. ಹಾಗೆ ಜೆಸ್ಕಾಂ ಇಲಾಖೆ ಅಧಿಕಾರಿಗಳನ್ನು ಈ ಸಂದರ್ಭದಲ್ಲಿ ತರಾಟೆಗೆ ತೆಗೆದುಕೊಂಡರು.

ಸರಕಾರ ಹೇಳುತಾಸ್ ಕರೆಂಟ್ ಕೊಡುತ್ತದೆ ಅಂತ ಹೇಳುತ್ತದೆ ಆದರೆ ಸುರಪುರ ಮತ್ತು ಹುಣಸಿಗಿ ತಾಲೂಕು ಜೆಸ್ಕಾ ಅಧಿಕಾ-ರಿಗಳು ಕೊಡುವ ಯೋಳು ತಾಸು ಕರೆಂಟ್ ನಲ್ಲಿ 50 ರಿಂದ 60 ಬಾರಿ ತೆಗೆದು ಹಾಕುತ್ತಾರೆ ನಮ್ಮ ರೈತರು ಈ ಸಮಸ್ಯೆಯಿಂದ ಬೇಸತ್ತು ಹೋಗಿದ್ದಾರೆ, ಕೂಡಲೇ ಜಿಲ್ಲಾಧಿಕಾರಿಗಳು ಈ ಸಮಸ್ಯೆಯನ್ನು ಜೆಸ್ಕಾಂ ಇಲಾಖೆ ಅಧಿಕಾ-ರಿಗಳ ಮುಂದೆ ನೀವು ಮಾತನಾಡಿ ಇದರ ಸಮಸ್ಯೆಯನ್ನು ಬಗೆಹರಿಸಿ ಕೊಡಬೇಕೆಂದು ಇದೇ ಸಂದರ್ಭದಲ್ಲಿ ಹೇಳಿದರು. ಹಾಗೆ ಒಂದು ವೇಳೆ ನಮ್ಮ ಮನವಿಗೆ ಸರ್ಕಾರ ಸ್ಪಂದಿಸದಿದ್ದರೆ ಜನವರಿ 26ರಂದು ಕೆನಾಲಿಗೆ ನೀರು ಏನಾದರೂ ಬಂದು ಮಾಡಿದರೆ ನಾವು ಕೂಡಲೇ ಬಸವಸಾಗರ ಅಣೆಕಟ್ಟು ನಾರಾಯಣಪುರ ಜಲಾಶಯಕ್ಕೆ ಯಾವುದೇ ಪರ್ಮಿಷನ್ ತೊಗೊಳೋದೆ ನಾವು ಮುತ್ತಿಗೆ ಹಾಕಲು ಎಲ್ಲಾ ರೈತರು ರೆಡಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು. ಹಾಗೆ ರೈತ-ರಿಗೆ ಇನ್ನೊಂದು ಕಿವಿ ಮಾತನ್ನು ಹೇಳಿದರು.

ಒಂದು ವೇಳೆ 26 ನೇ ತಾರೀಕಿಗೆ ನೀರು ಏನಾದರೂ ಬಂದು ಮಾಡಿದರೆ ನಿಮ್ಮ ಮನೆಯಲ್ಲಿ ಹೇಳಿ ನಾವು ನೀರು ತರಲು ಹೊರಟಿದ್ದೇವೆ ನಮಗೆ ನೀರು ಬಿಟ್ಟರೆ ಮನೆಗೆ ಬರುತ್ತೇವೆ ಇಲ್ಲದಿದ್ದರೆ ಯಾವ ಪೊಲೀಸ್ ಠಾಣೆಗೆ ಬೀಳಲು ರೆಡಿ ಇದ್ದೇವೆ ಎಂದು, ನಿಮ್ಮ ಮನೆಯಲ್ಲಿರುವ ಹೆಂಡತಿಯ-ರಿಗೆ ಮತ್ತು ಮಕ್ಕಳಿಗೆ ಹೇಳಿ ಬನ್ನಿ ಎಂದು ಈ ಸಂದರ್ಭದಲ್ಲಿ ರೈತರಿಗೆ ಕರೆ ಕೊಟ್ಟರು. ಈ ಸಂದರ್ಭದಲ್ಲಿ . ಹಲವು ರೈತ ಪರ ಸಂಘಟನೆಗಳು ಮತ್ತು ವಿವಿಧ ಸಂಘಟನೆಯ ಮುಖಂಡರು ಮತ್ತು ರೈತರು ಹಾಗೆ ಸ್ವಾಮೀಜಿಗಳು ಮತ್ತು ಪ್ರಗತಿಪರ ಚಿಂತಕರು ಪ್ರಗತಿಪರ ಹೋರಾಟಗಾರರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101